ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಜುಲೈ 01, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 48 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999






ಚಿತ್ರ : ಜಿಗಳಿ ಪ್ರಕಾಶ್

**ಬಿತ್ತನೆ ಚುರುಕು...** ಮಲೇಬೆನ್ನೂರು ಪಟ್ಟಣದ ಆಶ್ರಯ ಕಾಲೋನಿ ಬಳಿ ಮಳೆಯಾಶ್ರಿತ ಗುಡ್ಡದ ಜಮೀನುಗಳಲ್ಲಿ ಗುರುವಾರ ಹದ ಮಳೆಯಾದ ಹಿನ್ನೆಲೆಯಲ್ಲಿ ಶುಕ್ರವಾರ ರೈತರು ಬಿತ್ತನೆ ಮಾಡಿದರು.

# ಮೇಕೆದಾಟು ಸಮೀಪ ಬೃಹತ್ ಅಣೆಕಟ್ಟು

## ಯೋಜನೆಗೆ ಅಗತ್ಯವಿರುವ ಭೂಮಿ ಸ್ವಾಧೀನಕ್ಕೆ ಡಿಸಿಎಂ ಡಿಕೆಶಿ ತೀರ್ಮಾನ

ಬೆಂಗಳೂರು, ಜೂ. 30- ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಸಮಾನಾಂತರವಾಗಿ ಮೇಕೆದಾಟು ಸಮೀಪ ಬೃಹತ್ ಅಣೆಕಟ್ಟು ನಿರ್ಮಿಸುವ ಯೋಜನೆಗೆ ರಾಜ್ಯ ಸರ್ಕಾರ ಚಾಲನೆ ನೀಡಿದೆ.

ಬೃಹತ್ ಜಲಸಂಪನ್ಮೂಲ ಇಲಾಖೆ ಹೊಣೆ ಹೊತ್ತಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೇಕೆದಾಟು ಯೋಜನೆ ಅನುಷ್ಠಾನ ಕುರಿತಂತೆ ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ಬಿಡಾರ ಹೂಡಿ, ಕಾನೂನು ತಜ್ಞರು ಮತ್ತು ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿದ ನಂತರ ಯೋಜನೆಗೆ ಅಗತ್ಯವಿರುವ ಭೂಮಿಯ ಭೂಸ್ವಾಧೀನ ಮಾಡಲು ತೀರ್ಮಾನ ಕೈಗೊಂಡಿದ್ದಾರೆ.

ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಾಡುತ್ತಿರುವ ಹಿರಿಯ ನ್ಯಾಯವಾದಿ ಮುಕುಲ್ ರೋಹಟಗಿ ಅವರು ನೀಡಿರುವ ಸಲಹೆ, ಸೂಚನೆಯಂತೆ ಶಿವಕುಮಾರ್ ಈ ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ಅಲ್ಲದೇ ಅವರ ಸಲಹೆಯಂತೆ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಸಮಾಲೋಚನೆ ನಡೆಸಲು ಸೋಮವಾರ ಜುಲೈ 3ರಂದು ಮಧ್ಯಾಹ್ನ ಮೂರು ಗಂಟೆಗೆ ಉಪ ಮುಖ್ಯಮಂತ್ರಿಗಳು ಉನ್ನತ ಮಟ್ಟದ ಅಧಿಕಾರಿಗಳ ಸಭೆ ಕರೆದಿದ್ದಾರೆ.

**ಕಾನೂನು ತಜ್ಞರು ಮತ್ತು ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಶಿವಕುಮಾರ್**



ನಿನ್ನೆ ರೋಹಟಗಿ ಅವರನ್ನು ಭೇಟಿಯಾಗಿ ಯೋಜನೆಗೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆಸಿದ್ದಲ್ಲದೆ, ಅನುಷ್ಠಾನ ಮಾಡುವ ಸಂಬಂಧ ಕಾನೂನಾತ್ಮಕವಾಗಿ ಅವರಿಂದ ಸಲಹೆ ಪಡೆದರು. ಅಷ್ಟೇ ಅಲ್ಲ, ಕೇಂದ್ರ ಜಲಶಕ್ತಿ ಸಚಿವರಿಗೆ ರಾಜ್ಯ ಸರ್ಕಾರದ ಪರವಾಗಿ ಸಲ್ಲಿಸಲು ಮನವಿ ಪತ್ರವನ್ನು ರೋಹಟಗಿ ಅವರೇ ಸಿದ್ಧಪಡಿಸಿಕೊಟ್ಟರು.

ಕಾನೂನು ತಜ್ಞರು ನೀಡಿದ ಪತ್ರವನ್ನು ಇಂದು ಕೇಂದ್ರ ಜಲಸಂಪನ್ಮೂಲ ಸಚಿವ ಗಜೇಂದ್ರಸಿಂಗ್ ಶೇಖಾವತ್ ಅವರನ್ನು ಭೇಟಿಯಾಗಿ ನೀಡಿದ್ದಲ್ಲದೆ, ಯೋಜನೆ ಅನುಷ್ಠಾನಕ್ಕೆ ಅಗತ್ಯ ಸಹಕಾರ ಕೋರಿದರು.

ಕರ್ನಾಟಕ ಸರ್ಕಾರದ ಮನವಿಗೆ ಸ್ಪಂದಿಸಿದ ಕೇಂದ್ರ ಸಚಿವರು, ಕಾವೇರಿ ನ್ಯಾಯಾಧೀಕರಣದ ತೀರ್ಪು ಹಾಗೂ ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಕಾನೂನಾತ್ಮಕವಾಗಿ ಕೈಗೊಳ್ಳುವ ಕುಡಿಯುವ ನೀರು ಯೋಜನೆಗೆ ನಮ್ಮ ಸಹಮತವಿದೆ ಎಂದಿದ್ದಾರೆ.

ಅರಣ್ಯ ಭೂಮಿ ದೊಡ್ಡ ಪ್ರಮಾಣದಲ್ಲಿ ಮುಳುಗಡೆಯಾಗುವುದನ್ನು ತಪ್ಪಿಸಲು ಸಮನಾಂತರ ಅಣೆಕಟ್ಟೆ ಜತೆಗೆ ಮೂರು ಸಣ್ಣ ಪ್ರಮಾಣದ ಅಣೆಕಟ್ಟುಗಳನ್ನು ನಿರ್ಮಾಣ ಮಾಡುವ ಬಗ್ಗೆಯೂ ಚಿಂತನೆ ನಡೆದಿದೆ.

ಶಿವಕುಮಾರ್ ಈ ಹಿಂದೆ ಜಲ (3ನೇ ಪುಟಕ್ಕೆ)

# ಏಕರೂಪ ನಾಗರಿಕ ಸಂಹಿತೆ ಕರಡು ಸಿದ್ಧ

ನವದೆಹಲಿ, ಜು. 30- ಏಕರೂಪ ನಾಗರಿಕ ಸಂಹಿತೆ ಜಾರಿಗಾಗಿ ಸಿದ್ಧಪಡಿಸಲಾಗುತ್ತಿರುವ ಕರಡು ವರದಿಯನ್ನು ಶೀಘ್ರದಲ್ಲೇ ಉತ್ತರಾಖಂಡ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ ಎಂದು ಕರಡು ಸಮಿತಿಯ ಸದಸ್ಯೆ ನಿವೃತ್ತ ನ್ಯಾಯಮೂರ್ತಿ ರಂಜನಾ ಪ್ರಸಾದ್ ದೇಸಾಯಿ ಹೇಳಿದ್ದಾರೆ.

ದೆಹಲಿಯಲ್ಲಿ ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಉತ್ತರಾಖಂಡದ ಉದ್ದೇಶಿತ ಏಕರೂಪ ನಾಗರಿಕ ಸಂಹಿತೆಯ ಕರಡು ಈಗ ಪೂರ್ಣಗೊಂಡಿದೆ ಎಂದು ತಿಳಿಸಲು ನನಗೆ ತುಂಬಾ ಸಂತೋಷವಾಗಿದೆ ಎಂದರು.

ಕರಡು ಪ್ರತಿಯೊಂದಿಗೆ ತಜ್ಞರ ಸಮಿತಿಯ ವರದಿಯನ್ನು ಶೀಘ್ರದಲ್ಲೇ ಮುದ್ರಿಸಿ ಉತ್ತರಾಖಂಡ ಸರ್ಕಾರಕ್ಕೆ ಸಲ್ಲಿಸಲಾಗುವುದು. ಸಮಿತಿಯು ತನ್ನ ವರದಿಯನ್ನು ಹದಿನೈದು ದಿನಗಳಲ್ಲಿ ಸರ್ಕಾರಕ್ಕೆ ಸಲ್ಲಿಸುವ ನಿರೀಕ್ಷೆಯಿದೆ ಎಂದು ಹೇಳಿದು.

ಸಮಿತಿಯು ರಚನೆಯಾದಾಗಿನಿಂದ ಇಲ್ಲಿಯವರೆಗೆ ಆನ್‌ಲೈನ್ ಮತ್ತು ಆಫ್‌ಲೈನ್ ಮಾಧ್ಯಮದ ಮೂಲಕ 2.5 ಲಕ್ಷಕ್ಕೂ ಹೆಚ್ಚು ಸಲಹೆಗಳನ್ನು ಸ್ವೀಕರಿಸಿದೆ. ಎಲ್ಲಾ 13 ಜಿಲ್ಲೆಗಳ ಮಧ್ಯಸ್ಥಗಾರರೊಂದಿಗೆ ನೇರವಾಗಿ ಸಂವಾದ ನಡೆಸಿದ್ದಾರೆ. ನವದೆಹಲಿಯಲ್ಲಿ ವಲಸಿಗ ಉತ್ತರಾಖಂಡದವರ ಜೊತೆ ಚರ್ಚೆ ನಡೆಸಲಾಗಿದೆ. ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ರೂಪಿಸಿದ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಉತ್ತರಾಖಂಡ ಪಾತ್ರವಾಗಲಿದೆ.

ಎಲ್ಲಾ ಧರ್ಮಗಳ ಹುಡುಗಿಯರ ಮದುವೆಯ ವಯಸ್ಸನ್ನು ಏಕರೂಪವಾಗಿಸಲು ಯುಸಿಸಿ ಪ್ರಸ್ತಾಪಿಸುತ್ತದೆ. ವೈಯಕ್ತಿಕ ಕಾನೂನಿನಲ್ಲಿ ಮತ್ತು ಅನೇಕ ಪರಿಶಿಷ್ಟ (3ನೇ ಪುಟಕ್ಕೆ)

# ಕೆರೆ ತುಂಬಿಸುವ ಯೋಜನೆ ಕಾಮಗಾರಿ ವಿಳಂಬ

ಜಗಳೂರು, ಜೂ.30- ಸಾಸ್ವೇಹಳ್ಳಿ ಏತ ನೀರಾವರಿ ಕಾಮಗಾರಿ ಪ್ರಗತಿಯ ಮಾದರಿಯಲ್ಲಿ ಜಗಳೂರು 57 ಕೆರೆ ತುಂಬಿಸುವ ಯೋಜನೆ ಕಾಮಗಾರಿ ಪ್ರಗತಿಯ ವರದಿ ಪಟ್ಟಿ ತಯಾರಿಸಿ ಶೀಘ್ರ ಪ್ರತ್ಯೇಕ ಸಭೆ ನಡೆಸಲು ಸಿರಿಗೆರೆ ಬೃಹನ್ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಸಲಹೆ ನೀಡಿದರು.

ಸಿರಿಗೆರೆ ಬೃಹನ್ಮಠದ ನ್ಯಾಯಪೀಠದಲ್ಲಿ ಇಂದು ಕರೆದಿದ್ದ 57 ಕೆರೆ ತುಂಬಿಸುವ ಯೋಜನೆಗಳ ಕಾಮಗಾರಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಕಳೆದ 6 ವರ್ಷಗಳ ಹಿಂದೆ



ಭರಮಸಾಗರ ಹಾಗೂ ಜಗಳೂರು ಕೆರೆ ತುಂಬಿಸುವ ಅವಳಿ ಯೋಜನೆಗಳು ಒಟ್ಟಿಗೆ ಸಾಕಾರಗೊಂಡಿದ್ದವು.ಆದರೆ ಜಗಳೂರು ಕೆರೆ ತುಂಬಿಸುವ ಯೋಜನೆ ಪೈಪ್ ಲೈನ್ ಕಾಮಗಾರಿ ವಿಳಂಬವಾಗಿದೆ ಎಂದು ಶ್ರೀಗಳು ಅಸಮಧಾನ ವ್ಯಕ್ತಪಡಿಸಿದರು.

**ಸಿರಿಗೆರೆ ಶ್ರೀಗಳ ಅಸಮಾಧಾನ**

ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆ ಕೊನೆಯಲ್ಲಿ ಆರಂಭವಾಗಿದ್ದರೂ ತ್ವರಿತಗತಿಯಲ್ಲಿ ಕಾಮಗಾರಿ ನಡೆದು ಮುಕ್ತಾಯದ ಹಂತದಲ್ಲಿದೆ. ಕೂಡಲೇ ಅಧಿಕಾರಿಗಳು ಗುತ್ತಿಗೆದಾರರು ಪೂರ್ಣ ಹಾಗೂ ಅಪೂರ್ಣಗೊಂಡಿರುವ ಕಾಮಗಾರಿಗಳ ವಿವರಗಳ ದಾಖಲಾತಿ ವರದಿ ತಯಾರಿಸಿ ಸಂಸದರು, ಶಾಸಕರಿಗೆ ಹಾಗೂ ನ್ಯಾಯ ಪೀಠಕ್ಕೆ ತಲುಪಿಸಬೇಕು (5ನೇ ಪುಟಕ್ಕೆ)

# ಖಾಲಿ ಸೈಟುಗಳಲ್ಲಿ ಹೆಚ್ಚುತ್ತಿದೆ ಕಸದ ರಾಶಿ

**ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ**

ದಾವಣಗೆರೆ, ಜು. 30- ಜೀವನದಲ್ಲಿ ಒಂದು ಸ್ವಂತ ಮನೆ ನಿರ್ಮಿಸಿಕೊಳ್ಳಬೇಕು. ಕೊನೆ ಪಕ್ಷ ದಾವಣಗೆರೆಯಂತಹ ನಗರದಲ್ಲಿ ಒಂದು ಸೈಟನ್ನಾದರೂ ಕೊಳ್ಳಬೇಕು ಎಂಬುದು ಮಧ್ಯಮ ವರ್ಗದ ಜನರ ಕನಸು.

ಬೆಳ್ಳಿ-ಬಂಗಾರ ಕೊಳ್ಳುವುದು ಅಥವಾ ಮನೆಯಲ್ಲಿ ಹಣ ಇಟ್ಟುಕೊಳ್ಳುವುದಕ್ಕಿಂತ ಸೈಟುಗಳನ್ನು ಖರೀದಿಸಿ ಇಟ್ಟುಕೊಂಡರೆ ಉತ್ತಮ. ಮುಂದಿನ ದಿನಗಳಲ್ಲಿ ಅದರ ಬೆಲೆಯೂ ಹೆಚ್ಚಾಗುತ್ತದೆ ಎಂಬುದು ಹಣ ಇದ್ದವರ ದೂರಾಲೋಚನೆ. ಇದಕ್ಕೆ ಪುಷ್ಠಿ ಎಂಬಂತೆ ಕಳೆದ ಕೆಲವು ವರ್ಷಗಳಲ್ಲಿ ನಿವೇಶನಗಳ ಬೆಲೆ ದುಪ್ಪಟ್ಟಾಗಿರುವುದೂ ನಿಜವೇ.

ರಿಯಲ್ ಎಸ್ಟೇಟ್ ಏಜೆಂಟ್‌ಗಳ ಮಾಹಿತಿ ಪ್ರಕಾರ ದಾವಣಗೆರೆಗೆ ಕರ್ತವ್ಯ ನಿಮಿತ್ತ ವಿವಿಧ ಇಲಾಖೆಗಳಿಂದ ಬರುವ ಸರ್ಕಾರಿ ಅಧಿಕಾರಿಗಳು, ನೌಕರರು ಅಗತ್ಯವೋ ಅನಗತ್ಯವೋ ನಗರದಲ್ಲೊಂದು ಸೈಟುಕೊಳ್ಳದೇ ಇರಲಾರರು.

ಹೀಗಾಗಿ ದಾವಣಗೆರೆ ಸುತ್ತ ಮುತ್ತಲಿನ ಜಮೀನುಗಳು ಜನವಸತಿ ಪ್ರದೇಶಗಳಾಗುತ್ತಿವೆ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ನಿವೇಶನಗಳನ್ನಾಗಿ ಮಾರ್ಪಡಿಸಲಾಗುತ್ತಿದೆ. ಇದು ಬಿಲ್ಡರ್‌ಗಳಿಗೆ, ರಿಯಲ್ ಎಸ್ಟೇಟ್ ಏಜೆಂಟರ್‌ಗಳಿಗೆ ಅತಿ ಹೆಚ್ಚು ಲಾಭ ತಂದು ಕೊಡುವ ಕೆಲಸವಾಗಿದೆ.



**ಮಳೆಗಾಲದಲ್ಲಿ ರೋಗಗಳು ಹೆಚ್ಚಾಗುವ ಆತಂಕ**

ಅಂದಾಜಿನ ಪ್ರಕಾರ ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ 41 ಸಾವಿರಕ್ಕೂ ಹೆಚ್ಚು ಖಾಲಿ ನಿವೇಶನಗಳಿವೆ. ಮಾಲೀಕರ ಅಸಡ್ಡೆಯಿಂದಾಗಿ ನಿರ್ವಹಣೆ ಇಲ್ಲದೆ ತ್ಯಾಜ್ಯ ಸಂಗ್ರಹಣಾ ಘಟಕಗಳಾಗಿ ಮಾರ್ಪಟ್ಟಿವೆ. ಡೆಂಗ್ಯೂ ಸೇರಿದಂತೆ ಅನೇಕ ಕಾಯಿಲೆಗಳ ಕೊಡುಗೆಯನ್ನು ನಗರಕ್ಕೆ ನೀಡುತ್ತಿವೆ. ಹಂದಿಗಳ ಸುರಕ್ಷಿತ ತಾಣವಾಗಿವೆ. ಗಿಡ ಗಂಟಿಗಳು ಬೆಳೆದು ಹುಳ-ಉಪ್ಪಡಿಗಳ ತಾಣವೂ ಆಗುತ್ತಿವೆ.

ಓಣಿಯಲ್ಲೊಂದು ಖಾಲಿ ನಿವೇಶನ ಇತ್ತೆಂದರೆ ಸಾಕು, ರಾತ್ರಿಯಾಗುತ್ತಲೇ ಕಸ ತುಂಬಿದ ಪ್ಲಾಸ್ಟಿಕ್ ಚೀಲಗಳು, ತೆಂಗಿನ ಚಿಪ್ಪುಗಳು ಸೇರಿದಂತೆ ತ್ಯಾಜ್ಯ ವಸ್ತುಗಳೇ ಅಲ್ಲಿ ಬಂದು ಬೀಳುತ್ತವೆ. ನಿವೇಶನದ ಅಕ್ಕ ಪಕ್ಕದವರು ನೈರ್ಮಲ್ಯಕ್ಕೆ ಹೆದರಿ ಕಸ ಹಾಕದಿದ್ದರೂ, ಕಸ ಹಾಕಬೇಡಿ ಎಂದು ಇತರರಿಗೆ ಹೇಳಿದ್ದರೂ, ರಾತ್ರಿ ಕತ್ತಲಾಗುತ್ತಿದ್ದಂತೆ ಕವರ್‌ಗಳು ರಾಕೆಟ್ ವೇಗದಲ್ಲಿ ಎಲ್ಲಿಂದಲೋ ಬಂದು ಬೀಳುತ್ತಿರುತ್ತವೆ. ಇದರ ಜೊತೆ ಮದ್ಯದ ಬಾಟಲೀಗಳು (2ನೇ ಪುಟಕ್ಕೆ)

# ಸಾರ್ವತ್ರಿಕ ವರ್ಗಾವಣೆ ಅವಧಿ ಮತ್ತೆ ವಿಸ್ತರಣೆ

ಬೆಂಗಳೂರು, ಜೂ.30- ರಾಜ್ಯ ಸರ್ಕಾರ ಈಗ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆ ಅವಧಿಯನ್ನು ಮತ್ತಷ್ಟು ದಿನಗಳ ಕಾಲ ವಿಸ್ತರಣೆ ಮಾಡಿದೆ. ಜೂನ್ 1 ರಿಂದ 15 ರವರೆಗೆ ವರ್ಗಾವಣೆ ಮಾಡಲು ಸೂಚನೆ ನೀಡಲಾಗಿತ್ತು. ಇದಾದ ನಂತರ ಸಾರ್ವತ್ರಿಕ ವರ್ಗಾವಣೆ ಅವಧಿಯಲ್ಲಿ ಜೂ.30ರವರೆಗೆ ವಿಸ್ತರಣೆ ಮಾಡಲಾಗಿತ್ತು. ಈಗ ಮತ್ತೊಮ್ಮೆ ವಿಸ್ತರಣೆ ಮಾಡಿರುವ ಸರ್ಕಾರ ಜುಲೈ 3ರವರೆಗೆ ವಿಸ್ತರಣೆ ಮಾಡಿ ಆದೇಶ ಹೊರಡಿಸಿದೆ.

# ಗ್ಯಾರಂಟಿಗಳ ಅನುಷ್ಠಾನಕ್ಕೆ ಆಗ್ರಹಿಸಿ 4ರಂದು ಧರಣಿ



ಬೆಂಗಳೂರು, ಜೂ. 30- ಕಾಂಗ್ರೆಸ್ ಪಕ್ಷ ನೀಡಿದ್ದ ಗ್ಯಾರಂಟಿಗಳ ಸಮರ್ಪಕ ಅನುಷ್ಠಾನಕ್ಕೆ ಆಗ್ರಹಿಸಿ ಜುಲೈ 4ರಂದು ವಿಧಾನಸೌಧದ ಮುಂದೆ ಗಾಂಧಿ ಪ್ರತಿಮೆ ಬಳಿ ಒಂದು ದಿನ ಧರಣಿ ಸತ್ಯಾಗ್ರಹ ಮಾಡಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ಮನೆ ಮನೆಗೆ ಹೋಗಿ ಸಿದ್ದರಾಮಯ್ಯ, ಶಿವಕುಮಾರ್ ಅವರು ಸಹಿ ಮಾಡಿ ಕೊಟ್ಟ ಗ್ಯಾರಂಟಿ ಕಾರ್ಡಿನ (3ನೇ ಪುಟಕ್ಕೆ)




# ಆಸಿಡ್ ದಾಳಿ ಸಂತ್ರಸ್ತೆಗೆ ಉದ್ಯೋಗ: ಸಿಎಂ ಸೂಚನೆ



ಬೆಂಗಳೂರು, ಜೂ. 30-ಆಸಿಡ್ ದಾಳಿಗೆ ಒಳಗಾಗಿ ಸಂಕಷ್ಟಕ್ಕೆ ತುತ್ತಾಗಿದ್ದ ಸಂತ್ರಸ್ತೆ ಸ್ನಾತಕೋತ್ತರ ಉದ್ಯೋಗ ನೀಡಲು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದ್ದಾರೆ.

2022ರ ಏಪ್ರಿಲ್ 28 ರಂದು ಆಸಿಡ್ ದಾಳಿಗೆ ತುತ್ತಾಗಿದ್ದ ಸಂತ್ರಸ್ತೆ ಎಂ.ಕಾಂ ಪದವೀಧರೆ ಆಗಿದ್ದಾರೆ. ತಂದೆ ಮತ್ತು ತಾಯಿಯ ಜತೆ ಜನತಾ ದರ್ಶನಕ್ಕೆ ಬಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಂಡರು. ಅಹವಾಲು ಸ್ವೀಕರಿಸಿದ ಮುಖ್ಯಮಂತ್ರಿಗಳು ತಮ್ಮ ಸಚಿವಾಲಯದಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಆಸಿಡ್ ದಾಳಿ ಸಂಬಂಧ ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆಗೆ ಇಳಿದ ಪೊಲೀಸರು, ಆರೋಪಿ ಸ್ವಾಮಿ ವೇಷದಲ್ಲಿ ತಿರುವಣ್ಣಾಮಲೈ ಆಶ್ರಮದಲ್ಲಿ ತಲೆ ಮರೆಸಿಕೊಂಡಿರುವುದನ್ನು ಪತ್ತೆ ಹಚ್ಚಿದರು. ಬಳಿಕ ಭಕ್ತರ ವೇಷದಲ್ಲಿ ಹೋಗಿ (2ನೇ ಪುಟಕ್ಕೆ)



# 6ನೇ ಗ್ಯಾರಂಟಿ ಜಾರಿ ಮಾಡಿ, ಗ್ರಾಜ್ಯುಟಿ ನೀಡಲು ಆಗ್ರಹ

## ಹರಪನಹಳ್ಳಿಯಲ್ಲಿ ವಿವಿಧ ಬೇಡಿಕೆಗಳಿಗಾಗಿ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ



ಹರಪನಹಳ್ಳಿ, ಜೂ.30- ಅಂಗನವಾಡಿ ಕಾರ್ಯಕರ್ತೆಯರನ್ನು ಇ-ಸರ್ವೆ ಮುಕ್ತಗೊಳಿಸಲು ಮತ್ತು ಕಳಪೆ ಮೊಬೈಲ್, ಕಳಪೆ ಆಹಾರ ದಾಸ್ತಾನು, ಕಳಪೆ ಮೊಟ್ಟೆ ಇವುಗಳಿಂದ ಮುಕ್ತಿ ನೀಡಿ ಬಜೆಟ್‌ನಲ್ಲಿ ರೂ.15,000/-ಗಳ 6ನೇ ಗ್ಯಾರಂಟಿ ಜಾರಿ ಮಾಡಿ, ಗ್ರಾಜ್ಯುಟಿ ನೀಡಿ ಹಾಗೂ ಇನ್ನಿತರೆ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಅಂಗನವಾಡಿ ಕಾರ್ಯಕರ್ತೆಯರ ಸಂಘದ ತಾಲ್ಲೂಕು ಅಧ್ಯಕ್ಷರಾದ ಕೆರೆಗುಡಿಹಳ್ಳಿ ಟಿ.ಬಸಮ್ಮ ಮಾತನಾಡಿ, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳು ಅನುಷ್ಠಾನಕ್ಕಾಗಿ ಕಳೆದ 4 ವರ್ಷಗಳ ಹಿಂದೆ ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡಲಾಗಿರುವ ಮೊಬೈಲ್‌ಗಳು ಕಳಪೆ ಗುಣಮಟ್ಟದಿಂದ ಕೂಡಿದ್ದು, ಬಹುತೇಕ ಹಾಳಾಗಿವೆ. ಸದರಿ ಮೊಬೈಲ್‌ಗಳಲ್ಲಿ ಮಾಹಿತಿ ಸಂಗ್ರಹ ಸೇರಿದಂತೆ ಮತ್ತು ಇತರೆ ಕೆಲಸ ನಿರ್ವಹಿಸುವುದು ಕಷ್ಟಕರವಾಗಿರುತ್ತದೆ. ಇದರೊಂದಿಗೆ ಬೇರೆ ಇಲಾಖೆಯಾಗಿರುವ ಆರೋಗ್ಯ ಇಲಾಖೆಯ ಕಾರ್ಯಕ್ರಮದ ಆರೋಗ್ಯ ಸಮೀಕ್ಷೆಯನ್ನು ಅಂಗನವಾಡಿ ಕಾರ್ಯಕರ್ತೆಯರು ನಿರ್ವಹಿಸಿ, ತಮ್ಮ ಮೊಬೈಲ್‌ಗಳಲ್ಲಿ ಮಾಹಿತಿಗಳನ್ನು ಅಪ್‌ಲೋಡ್ ಮಾಡಲು ತೀವ್ರ ಒತ್ತಡ ಹೇರಲಾಗುತ್ತಿದೆ. ಈ ಕುರಿತಂತೆ ಹಲವಾರು ಬಾರಿ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಗಮನ ಸೆಳೆದಾಗ್ಯೂ ಸಹ ತಾವು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು ಸಂಘಟನಾ ಕಾರ್ಯದರ್ಶಿ ಗುಡಿಹಳ್ಳಿ ಹಾಲೇಶ್ ಮಾತನಾಡಿ, ಬೇರೆ ಇಲಾಖೆಯ ಕೆಲಸಗಳಿಗೆ ಅಂಗನವಾಡಿ ಕಾರ್ಯಕರ್ತೆಯರನ್ನು ಬಳಸಿಕೊಳ್ಳಬಾರದು. ಕಳಪೆ ಗುಣಮಟ್ಟದ ಮತ್ತು ಹಾಳಾಗಿರುವ ಮೊಬೈಲ್‌ಗಳನ್ನು ಕೂಡಲೇ ವಾಪಸ್ ಪಡೆದು ಹೊಸ ಮೊಬೈಲ್ ಅಥವಾ ಮಿನಿ ಟ್ಯಾಬ್‌ಗಳನ್ನು ನೀಡಬೇಕು.

ಅಂಗನವಾಡಿಗಳಿಗೆ ಸರಬರಾಜು ಮಾಡುತ್ತಿರುವ ಮೊಟ್ಟೆ ಟೆಂಡರ್‌ನ ಪರಿಣಾಮ ಮೊಟ್ಟೆಗಳು ಕಳಪೆ ಮತ್ತು ಕಡಿಮೆ ಗಾತ್ರದಿಂದ ಕೂಡಿದ್ದು, ಇದು ಮಕ್ಕಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀಳುತ್ತಿರುವುದರಿಂದ ಹಾಗೂ ಸರಿಯಾದ ಸಮಯಕ್ಕೆ ಸರಬರಾಜು ಮಾಡದೇ ಇರುವುದರಿಂದ ಮೊಟ್ಟೆ ಖರೀದಿಯ ಜವಾಬ್ದಾರಿಯನ್ನು ಬಾಲವಿಕಾಸ ಸಮಿತಿಗೆ ನೀಡಬೇಕು ಎಂಬ 7 ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಾರ್ಯದರ್ಶಿ ಶಿರಗನಹಳ್ಳಿ ಮಂಜುಳಾ, ಖಜಾಂಚಿ ಎನ್.ಎಂ. ಸುಮಂಗಲತಾಯಿ, ನೀಲಗುಂದ ಸುಮ, ನಿವೇದಿತ, ದುರುಗಮ್ಮ, ಎ.ಐ.ಟಿಯು.ಸಿ ಸಂಚಾಲಕ ಬಳಿಗಾನೂರು ಕೊಟ್ರೇಶ್, ಎಐಎಸ್‌ಎಫ್ ರಾಜ್ಯ ಮುಖಂಡ ರಮೇಶನಾಯ್ಕ, ಸಿಪಿಐ ಮುಖಂಡ ಚಂದ್ರನಾಯ್ಕ ಸೇರಿದಂತೆ ಇತರರು ಇದ್ದರು.

# ಗುಳದಹಳ್ಳಿ : 30 ಜನರಿಗೆ ಹಕ್ಕುಪತ್ರ ವಿತರಣೆ

## ಕಂದಾಯ ಇಲಾಖೆಯ ಕಾರ್ಯಕ್ಕೆ ಶಾಸಕ ಹರೀಶ್ ಮೆಚ್ಚುಗೆ



ಮಲೇಬೆನ್ನೂರು, ಜೂ. 30- ಗುಳದಹಳ್ಳಿ ಗ್ರಾಮದ ಸರ್ವೆ ನಂ. 22ರಲ್ಲಿರುವ ಗೋಮಾಳ ಜಾಗದಲ್ಲಿ ಅನಧಿಕೃತವಾಗಿ ವಾಸವಾಗಿದ್ದ 30 ಕುಟುಂಬಗಳಿಗೆ ಶುಕ್ರವಾರ ಶಾಸಕ ಬಿ.ಪಿ. ಹರೀಶ್ ಹಕ್ಕು ಪತ್ರ ವಿತರಣೆ ಮಾಡಿದರು.

ಈ ವೇಳೆ ಮಾತನಾಡಿದ ಹರೀಶ್ ಅವರು ಬಹಳ ವರ್ಷಗಳಿಂದ ಈ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಣೆ ನೆನೆಗುದಿಗೆಬಿದ್ದಿತ್ತು. ಕಂದಾಯ ಇಲಾಖೆಯ ಅಧಿಕಾರಿಗಳು ಆಸಕ್ತಿ ವಹಿಸಿ ಹಕ್ಕುಪತ್ರ ವಿತರಣೆಗೆ ವ್ಯವಸ್ಥೆ ಮಾಡಿರುವುದನ್ನು ಶಾಸಕ ಹರೀಶ್ ಪ್ರಶಂಸಿಸಿದರು.

ತಹಶೀಲ್ದಾರ್ ಪೃಥ್ವಿ ಸಾನಿಕಂ, ಉಪ ತಹಶೀಲ್ದಾರ್ ಆರ್. ರವಿ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ತಾ.ಪಂ. ಮಾಜಿ ಸದಸ್ಯ ಜಿ.ಸಿ. ಮಾಲತೇಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಗ್ರಾ.ಪಂ. ಸದಸ್ಯರಾದ ಚಂದ್ರಶೇಖರಚಾರಿ, ಎಂ.ಬಿ. ಉಮೇಶ್, ಶ್ರೀಮತಿ ಲಕ್ಷ್ಮಿ ಮಂಜಪ್ಪ, ಪಿಡಿಓ ಶಾಂತಪ್ಪ, ಬಿಜೆಪಿ ಬೂತ್ ಮಟ್ಟದ ಅಧ್ಯಕ್ಷ ನಾಗರಾಜ್, ಹಿರಿಯರಾದ ಜಿ.ಎಂ. ಶೇಖರಪ್ಪ, ಜಿ.ಆರ್. ಲಚ್ಚಪ್ಪ ರೆಡ್ಡಿ, ಜಿ.ಎಸ್. ದೇವೇಂದ್ರಪ್ಪ, ಜಿ.ಎಸ್. ನಾಗರಾಜಪ್ಪ, ಜಿ.ಟಿ. ನಾಗರಾಜಪ್ಪ ಸೇರಿದಂತೆ ಮತ್ತಿತರರು ಈ ವೇಳೆ ಹಾಜರಿದ್ದರು.





# ಮಲೇಬೆನ್ನೂರಿನಲ್ಲಿ ಸಂಭ್ರಮದ ಪರವು

ಮಲೇಬೆನ್ನೂರು, ಜೂ. 30 - ಉತ್ತಮ-ಮಳೆ-ಬೆಳೆಗಾಗಿ ಪ್ರಾರ್ಥಿಸಿ ಪಟ್ಟಣದ ಗ್ರಾಮ ದೇವತೆ ಶ್ರೀ ಏಕನಾಥೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಆಷಾಢ ಮಾಸದ ಶುಕ್ರವಾರ ಪ್ರಯುಕ್ತ ವಿಶೇಷ ಪೂಜೆ, ಅಭಿಷೇಕ ಹಾಗೂ ಅನ್ನ ಸಂತರ್ಪಣೆಯ ಪರವು ಹಮ್ಮಿಕೊಳ್ಳಲಾಗಿತ್ತು.

ಶ್ರೀ ಕೋಡಿ ಮಾದೇಶ್ವರಿ, ಶ್ರೀ ದುರ್ಗಾಂಬಿಕೆ, ಶ್ರೀ ಕಾಳಿಕಾದೇವಿ, ಶ್ರೀ ಚಂದ್ರಗುತ್ತೆಮ್ಮ, ಶ್ರೀ ಬಸವೇಶ್ವರ, ಶ್ರೀ ಬೀರಲಿಂಗೇಶ್ವರ, ಶ್ರೀ ಆಂಜನೇಯ ಸ್ವಾಮಿ ದೇವರುಗಳ ಸಮ್ಮುಖದಲ್ಲಿ ಜರುಗಿದ ಪರವು ಕಾರ್ಯಕ್ರಮದಲ್ಲಿ ಪಟ್ಟಣದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಉಡಿತುಂಬಿ ಪೂಜೆ ಸಲ್ಲಿಸಿದರು.

ಶಾಸಕ ಬಿ.ಪಿ. ಹರೀಶ್, ಬಿಜೆಪಿ ಮುಖಂಡರ ಚಂದ್ರಶೇಖರ ಪೂಜಾರ್, ಉಪ ತಹಶೀಲ್ದಾರ್ ಆರ್. ರವಿ, ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್, ಪಿಎಸ್‌ಐ ಪ್ರಭು ಕೆಳಗಿನ ಮನೆ, ಬೆಸ್ಕಾಂ ಶಾಖಾಧಿಕಾರಿ ಕೊಟ್ರೇಶ್ ಸೇರಿದಂತೆ ಇತರರು ಪರವಿನಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು.

# ಶಿರಡಿ ಮಂದಿರದಲ್ಲಿ ನಾಡಿದ್ದು ಗುರು ಪೂರ್ಣಿಮೆ



ದಾವಣಗೆರೆ, ಜೂ. 30- ನಗರದ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಬರುವ ಜುಲೈ 3ರ ಸೋಮವಾರದಂದು ಗುರು ಪೂರ್ಣಿಮೆ ಆಚರಿಸಲಾಗುವುದು.

ಅಂದು ಬೆಳಿಗ್ಗೆ 6 ಗಂಟೆಗೆ ಕಾಕಡಾರತಿ, 9 ಗಂಟೆಗೆ ದೀಪಾರಾಧನೆ, ಕಲಶ ಸ್ಥಾಪನೆ, ನಂತರ ಗೋಪುರ ಧ್ವಜಾರೋಹಣ ಕಾರ್ಯಕ್ರಮಗಳು ಏರ್ಪಾಡಾಗಿವೆ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ.

ಶ್ರೀ ಜಡೇಸಿದ್ಧ ಶಿವಯೋಗೀಶ್ವರ ಶಾಂತಾಶ್ರಮದ ಶ್ರೀ ಶಿವಾನಂದ ಸ್ವಾಮಿಗಳು, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಸ್.ಎಸ್. ಗಣೇಶ್, ಉಪಾಧ್ಯಕ್ಷ ಅಥಣಿ ವೀರಣ್ಣ ಮತ್ತು ಇತರರು ಉಪಸ್ಥಿತರಿರುವರು.

ಬೆಳಿಗ್ಗೆ 7 ರಿಂದ 2.30 ರವರೆಗೆ ಶ್ರೀ ಬಾಬಾರವರ ಬೆಳ್ಳಿಯ ಮೂರ್ತಿಗೆ ಹಾಲಿನ ಅಭಿಷೇಕ, ವಿಶೇಷ ಪೂಜೆ, ಅಲಂಕಾರ ಹಾಗೂ 12 ಗಂಟೆಗೆ ಮಹಾಮಂಗಳಾರತಿ ನಡೆಸಲಾಗುವುದು.

ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 12ರವರೆಗೆ ಸಾಯಿ ಸತ್ಯನಾರಾಯಣ ಪೂಜೆ, ರಾತ್ರಿ 8.30 ಕ್ಕೆ ಪಾಲಕಿ ಉತ್ಸವ, ಧುನಿ ಪೂಜೆ, ಶೇಜಾರತಿ ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ನಡೆಯುವುದು.

ದಿ. 3.07.2023 ರಿಂದ ವಿಜಯ ದಶಮಿವರೆಗೆ ಪ್ರತಿನಿತ್ಯ ಸಂಜೆ 7 ಗಂಟೆಯಿಂದ ಸಾಯಿ ಮಂದಿರದಲ್ಲಿ ವಿರೂಪಣ್ಣ ಅಂಬರ್‌ಕರ್ ಇವರು ಬಾಬಾರವರ ಪುರಾಣ ಪ್ರವಚನ ನಡೆಸಿಕೊಡುವರು.

# ಆಸಿಡ್ ದಾಳಿ ಸಂತ್ರಸ್ತೆಗೆ ಉದ್ಯೋಗ: ಸಿಎಂ ಸೂಚನೆ

**(1ನೇ ಪುಟದಿಂದ)** ಆರೋಪಿಯನ್ನು ಬಂಧಿಸಿದ್ದಾರೆ. ಸದ್ಯ ಆರೋಪಿ ಬೆಂಗಳೂರು ಜೈಲಿನಲ್ಲಿದ್ದಾನೆ. ಸಂತ್ರಸ್ತೆ ಚಿಕಿತ್ಸೆ ಪಡೆಯುತ್ತಾ ಚೇತರಿಸಿಕೊಳ್ಳುತ್ತಿದ್ದಾರೆ. ಚಿಕಿತ್ಸೆಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ನೆರವು ನೀಡಲಾಗಿದೆ.

# ಹಡಗಲಿ ಅರ್ಬನ್ ಬ್ಯಾಂಕ್ ಸುವರ್ಣ ಸಂಭ್ರಮ ಆಚರಿಸಲಿ

## ಹರಪನಹಳ್ಳಿ ಶಾಸಕರಾದ ಎಂ.ಪಿ ಲತಾ ಮಲ್ಲಿಕಾರ್ಜುನ್ ಆಶಯ




ಹೂವಿನಹಡಗಲಿ, ಜೂ. 30- ತಮ್ಮ ತಂದೆ ದಿ. ಎಂ.ಪಿ. ಪ್ರಕಾಶ್ ಅವರು 25 ವರ್ಷಗಳ ಹಿಂದೆ ಹಡಗಲಿ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಸ್ಥಾಪನೆ ಮಾಡಿದ್ದು, ಈಗ ಅದು ರಜತ ಮಹೋತ್ಸವವನ್ನು ಆಚರಿಸುತ್ತಿದೆ. ಮುಂದೆ ಸುವರ್ಣ ಸಂಭ್ರಮವನ್ನು ಆಚರಿಸಲಿ ಎಂದು ಹರಪನಹಳ್ಳಿ ಶಾಸಕರಾದ ಎಂ.ಪಿ ಲತಾ ಮಲ್ಲಿಕಾರ್ಜುನ್ ಆಶಯ ವ್ಯಕ್ತಪಡಿಸಿದರು.

ರಂಗಭಾರತಿಯಲ್ಲಿ ಬ್ಯಾಂಕಿನ 25 ವರ್ಷಗಳ ರಜತ ಸಿರಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜೀವನದಲ್ಲಿ ಕಷ್ಟಪಟ್ಟರೆ ಮಾತ್ರ ಪ್ರತಿಫಲ ಕಾಣಲು ಸಾಧ್ಯ ಎಂಬುದಕ್ಕೆ ನಾನೇ ಉದಾಹರಣೆಯಾಗಿದ್ದೇನೆ. ಅದೇ ರೀತಿ ಬ್ಯಾಂಕ್ ತನ್ನ ಸೇವಾವಧಿಯಲ್ಲಿ ಸಿಬ್ಬಂದಿ ಹಾಗೂ ಆಡಳಿತ ಮಂಡಳಿಯ ಶ್ರಮದಿಂದ ಇಂದು ಈ ಮಟ್ಟಕ್ಕೆ ಬೆಳೆದಿದೆ. ನನ್ನ ಸೋದರ ದಿ. ಎಂ.ಪಿ. ರವೀಂದ್ರ ಇವರು ನನಗೆ ಕರೆ ಮಾಡಿ, ಆಗ ಬ್ಯಾಂಕಿನ ಠೇವಣಿ ಕುರಿತು ಮಾತನಾಡಿದರು. ನಾನು ಠೇವಣಿಯನ್ನು ಇಟ್ಟಿದ್ದೇನೆ ಎಂದು ಸ್ಮರಿಸಿದರು.

ಬಿಡಿಸಿಸಿ ಬ್ಯಾಂಕ್‌ನ ಉಪಾಧ್ಯಕ್ಷ ತಿಪ್ಪೇಸ್ವಾಮಿ ಮಾತನಾಡಿ, ನಮ್ಮ ಬ್ಯಾಂಕಿನ ಅಧ್ಯಕ್ಷರಾಗಿದ್ದ ಎಂ.ಪಿ. ರವೀಂದ್ರ ಅವರು, ಬ್ಯಾಂಕಿನ ಸರ್ವ ತೋಮುಖ ಅಭಿವೃದ್ಧಿಗೆ ಶ್ರಮಿಸಿದರು. ಅವರ ನೆನಪಿಗಾಗಿ ಶತಮಾನೋತ್ಸವ ಭವನಕ್ಕೆ ಅವರ ಹೆಸರನ್ನಿಡಲು ಪ್ರಯತ್ನಿಸುತ್ತೇವೆ ಎಂದು ಹೇಳಿದರು.

ಎಂ.ಪಿ. ರವೀಂದ್ರ ಇವರು ಬಿಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗುವ ಮೊದಲು ಹಡಗಲಿ ತಾಲ್ಲೂಕಿನ ಬೆಳೆ ಸಾಲ 4.5 ಕೋಟಿ ಇತ್ತು, ಅವರು ಅಧ್ಯಕ್ಷರಾದ ಮೇಲೆ ಒಂದು ನೂರು ಕೋಟಿಗೆ ಬೆಳೆ ಸಾಲವನ್ನು ಕೊಟ್ಟಿದ್ದರು. ಅಂತಹ ರೈತಪರ, ಜನಪರ ಅಧ್ಯಕ್ಷರಾಗಿದ್ದರು. ಕೇಂದ್ರ ಸಹಕಾರ ಸಚಿವ ಅಮಿತ್ ಷಾ ರವರು ಡಿಜಿಟಲೀಕರಣ ಮಾಡುತ್ತಿ ದ್ದಾರೆ. ಅದನ್ನು ಎಂ.ಪಿ. ರವೀಂದ್ರ ಅವರು ಮೊದಲೇ ಮಾಡಿ ಹೋಗಿದ್ದಾರೆ ಎಂದು ಹೇಳಿದರು. ಕರ್ನಾಟಕದ ಎಲ್ಲಾ ಸಹಕಾರ ಬ್ಯಾಂಕುಗಳ ಪೈಕಿ ನಮ್ಮ ಬಿಡಿಸಿಸಿ ಬ್ಯಾಂಕ್ ಯು.ಪಿ.ಐ. ಬ್ಯಾಂಕ್ ಸಿಸ್ಟಮ್ ಹೊಂದಿರುವುದಾಗಿದೆ. ನೆಟ್ ಬ್ಯಾಂಕಿಂಗ್ ಸೇರಿದಂತೆ ಇಂತಹ ಹತ್ತಾರು ಕನಸುಗಳನ್ನು ಕಂಡ ಅವರು ಇಂದು ನಮ್ಮೊಂದಿಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷ ಎಂ. ನಾಗಭೂಷಣ ವಹಿಸಿದ್ದರು. ಸೋಗಿ ಪುರವರ್ಗ ಕಟ್ಟಿಮನಿ ಮಠದ ಶ್ರೀ ಸಿದ್ದವೀರ ಶಿವಾಚಾರ್ಯ ಸ್ವಾಮಿಗಳು, ಹಿರೇ ಮಲ್ಲನಕೆರೆ ಮಠದ ಶ್ರೀ ಅಭಿನವ ಚನ್ನಬಸವ ಸ್ವಾಮೀಜಿ, ಗವಿಸಿದ್ದೇಶ್ವರ ಮಠದ ಶ್ರೀ ಡಾ. ಹಿರಿಶಾಂತವೀರ ಸ್ವಾಮಿಗಳು ಸಮಾರಂಭದ ಸಾನ್ನಿಧ್ಯ ವಹಿಸಿದ್ದರು.

ಕಾವ್ಯ ಪ್ರಾರ್ಥಿಸಿದರು. ಹನುಮಂತ ನಿರೂಪಿಸಿದರು. ಎಂ.ಪಿ. ಸುಮಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಗಡ್ಡಿ ಗೌಡ್ರು ಶಿವಣ್ಣ ಸ್ವಾಗತಿಸಿದರು.

# ನಗರದಲ್ಲಿ ಇಂದು ಯಕ್ಷಗಾನ ಪ್ರದರ್ಶನ

ಶಿವದೂತ ಪಂಜುರ್ಲಿ ಯಕ್ಷಗಾನ ಪ್ರದರ್ಶನದ ಉದ್ಘಾಟನಾ ಸಮಾರಂಭವು ಇಂದು ಸಂಜೆ 6 ಗಂಟೆಗೆ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಸವಿಡೈನ್ ಮಹೇಶ್ ಶೆಟ್ಟಿ ಗೆಳೆಯರ ಬಳಗ, ಪ್ರೇರಣಾ ಯುವ ಸಂಸ್ಥೆ, ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಕಾರ್ಯಕ್ರಮವನ್ನು ಡಾ. ಎಂ.ಜಿ. ಈಶ್ವರಪ್ಪ ಉದ್ಘಾಟಿಸುವರು. ಮಲ್ಯಾಡಿ ಪ್ರಭಾಕರ ಶೆಟ್ಟಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಎಸ್.ಟಿ. ವೀರೇಶ್, ದಿನೇಶ್ ಕೆ. ಶೆಟ್ಟಿ, ಕೊಕ್ಕರ್ಣೆ ಸದಾಶಿವ ಅಮೀನ್, ಸಾಲಿಗ್ರಾಮ ಗಣೇಶ್ ಶೆಣೈ, ಕೆ.ಹೆಚ್. ಮಂಜುನಾಥ್ ಆಗಮಿಸುವರು.

# ನಗರದಲ್ಲಿ ಇಂದು ರೋಟರಿ ದಾವಣಗೆರೆ ದಕ್ಷಿಣ ಪದಗ್ರಹಣ

ರೋಟರಿ ಸಂಸ್ಥೆ ದಾವಣಗೆರೆ ದಕ್ಷಿಣದ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಇಂದು ಸಂಜೆ 6.30 ಕ್ಕೆ ರೋಟರಿ ಬಾಲಭವನದ ಸಿ. ಕೇಶವಮೂರ್ತಿ ಸಭಾಂಗಣದಲ್ಲಿ ನಡೆಯಲಿದೆ.

ನೂತನ ಅಧ್ಯಕ್ಷ ಎಂ.ಆರ್. ಪುಟ್ಟೇಶಿ ಅವರ ತಂಡಕ್ಕೆ ಹಾಲಿ ಅಧ್ಯಕ್ಷ ಸಿ.ಕೆ. ರಂಗಪ್ಪ ಅವರು ಅಧಿಕಾರ ಹಸ್ತಾಂತರ ಮಾಡಲಿದ್ದಾರೆ. ಉದ್ಘಾಟನೆ : ಕೆ.ಎಸ್. ನಾಗೇಂದ್ರ. ಮುಖ್ಯ ಅತಿಥಿಗಳು: ಆರ್.ಎಸ್. ನಾರಾಯಣಸ್ವಾಮಿ, ನಯನ ಪಾಟೀಲ್.

# ಸಿರಿಗೆರೆಯಲ್ಲಿ ಇಂದು ಉಪನ್ಯಾಸ



ಶ್ರೀ ಗುರುಶಾಂತೇಶ್ವರ ದಾಸೋಹ ಭವನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಮುಂಬಯಿನ ಭಾರತೀಯ ವಿಜ್ಞಾನ ಸಂಸ್ಥೆಯ ವಿಶ್ರಾಂತ ಪ್ರಾಧ್ಯಾಪಕ ಡಾ. ಶಿವಾನಂದ ಕಣವಿಯವರಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ. ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸುವರು.

ಇದೇ ಸಂದರ್ಭದಲ್ಲಿ ಶಿವಾನಂದ ಕಣವಿ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ಮಾಡಲಿದ್ದಾರೆ. ಕನ್ನಡದ ಸುಪ್ರಸಿದ್ಧ ಕವಿ ಚೆನ್ನವೀರ ಕಣವಿಯವರ ಪುತ್ರರಾದ ಶಿವಾನಂದ ಕಣವಿ ಅವರು ಟಿಸಿಎಸ್ ನ ಮಾಜಿ ಉಪಾಧ್ಯಕ್ಷರು. ಪ್ರಸ್ತುತ ಬೆಂಗಳೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ನ (ಎನ್ ಐ ಎ ಎಸ್) ಅಡ್ಜಂಕ್ಟ್ ಫ್ಯಾಕಲ್ಟಿ ಆಗಿದ್ದಾರೆ.

'ಸ್ಯಾಂಡ್ ಟು ಸಿಲಿಕಾನ್ ದಿ ಅಮೇಜಿಂಗ್ ಸ್ಟೋರಿ ಆಫ್ ಡಿಜಿಟಲ್ ಟೆಕ್ನಾಲಜಿ' ಇವರ ಪ್ರಮುಖ ಕೃತಿಯಾಗಿದೆ. ಇದರಲ್ಲಿ ತಂತ್ರಜ್ಞಾನದ ವಿಕಾಸ ಮತ್ತು ಭಾರತೀಯರು ಅದಕ್ಕೆ ನೀಡಿದ ಮೂಲ ಕೊಡುಗೆಗಳ ಬಗ್ಗೆ ಆಳವಾಗಿ ಸಂಶೋಧಿಸಿ ಬರೆದಿದ್ದಾರೆ. 'ಬ್ಯುಸಿನೆಸ್ ಆಫ್ ಇಂಡಿಯಾ' ನಿಯತಕಾಲಿಕದ ಸಂಪಾದಕ ಸಲಹೆಗಾರರಾಗಿದ್ದಾರೆ.

# ಸೈಟುಗಳಲ್ಲಿ ಹೆಚ್ಚುತ್ತಿದೆ ಕಸದ ರಾಶಿ

**(1ನೇ ಪುಟದಿಂದ)** ಸಹ ಹೆಚ್ಚಾಗಿವೆ. ಇದು ಮಹಾನಗರ ಪಾಲಿಕೆ ಅಧಿಕಾರಿಗಳಿಗೂ ತಲೆ ನೋವಿನ ವಿಷಯ.

ನಿವೇಶನದ ಮಾಲೀಕರು ಅವುಗಳನ್ನು ನಿರ್ವಹಣೆ ಮಾಡಬೇಕು ಎಂಬ ನಿಯಮವಿದೆ. ಕೊಂಡ ನಿವೇಶನದ ಸುತ್ತ ಕಾಂಪೌಂಡ್ ನಿರ್ಮಿಸಿ, ಆಗಾಗ್ಗೆ ಸ್ವಚ್ಛಗೊಳಿಸಬೇಕು. ಆದರೆ ಈ ನಿಯಮವನ್ನು ಯಾರೂ ಪಾಲಿಸುತ್ತಿಲ್ಲ.

ಈಗಾಗಲೇ ಅನೇಕ ಬಾರಿ ನಿವೇಶನಗಳನ್ನು ಸ್ವಚ್ಛಗೊಳಿಸುವಂತೆ ಮಾಲೀಕರಿಗೆ ನೋಟೀಸ್ ನೀಡಿದ್ದೇವೆ. ಕಸ ತುಂಬಿದ ನಿವೇಶನಗಳನ್ನು ಪಾಲಿಕೆಯಿಂದಲೇ ಸ್ವಚ್ಛಗೊಳಿಸಿ ಮಾಲೀಕರಿಂದ ಹಣ ವಸೂಲಿ ಮಾಡುತ್ತೇವೆ ಎಂದು ಆರಂಭ ಶೂರತ್ವ ತೋರಿದ್ದ ಪಾಲಿಕೆ ಅಧಿಕಾರಿಗಳು ಮತ್ತೆ ಸುಮ್ಮನಾಗಿದ್ದಾರೆ.

ಮಾಲೀಕರು ಎಲ್ಲಿದ್ದಾರೆ ಎಂದು ಪತ್ತೆ ಹಚ್ಚುವ ಕಷ್ಟವೂ ಸಹ ಈ ಮೌನಕ್ಕೆ ಕಾರಣವಾಗಿರಬಹುದು. ಆದರೆ ಮಳೆಗಾಲ ಆರಂಭವಾಗಿದೆ. ಸೈಟುಗಳಲ್ಲಿ ನೀರು ನಿಂತು ಕೊಳಚೆ ತಾಣವಾಗುತ್ತಿವೆ. ಸೊಳ್ಳೆಗಳು ಹೆಚ್ಚಾಗುತ್ತಿವೆ. ಹಂದಿ ನಾಯಿಗಳ ವಾಸ ಸ್ಥಾನಗಳಾಗುತ್ತಿವೆ.

ಮಹಾನಗರ ಪಾಲಿಕೆ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸಿ, ತಡೆಗೋಡೆ ನಿರ್ಮಿಸಿ, ಮಾಲೀಕರಿಂದ ಖರ್ಚು ವಸೂಲಿ ಮಾಡುವ ಅಥವಾ ದಂಡ ಹಾಕುವ ಪ್ರಕ್ರಿಯೆ ಚುರುಕುಗೊಳಿಸಬೇಕಿದೆ.

# ಸಂಶೋಧನೆಗಳು ಜನರ ಬದುಕಿಗೆ ಉಪಯೋಗವಾಗಬೇಕು




## ರಾಣೇಬೆನ್ನೂರಿನ ಶಾಸಕ ಪ್ರಕಾಶ ಕೋಳಿವಾಡ

ರಾಣೇಬೆನ್ನೂರು, ಜೂ. 30 - ಸಂಶೋಧನೆ ಕಛೇರಿಗಳ ಕಡತಗಳಲ್ಲಿ ಕೊಳೆಯಬಾರದು, ಕೇವಲ ಪತ್ರಿಕೆಗಳಲ್ಲಿ ಬರುವ ಸುದ್ದಿಗೆ ಸೀಮಿತವಾಗಬಾರದು ಅದರ ಪ್ರತಿಫಲ ದೇಶಕ್ಕೆ, ಸಾರ್ವಜನಿಕರಿಗೆ ದೊರಕುವಂತಾಗಬೇಕು ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ಅವರು ಇಂದು ಇಲ್ಲಿನ ರಾಜರಾಜೇಶ್ವರಿ ಶಾಲೆಯಲ್ಲಿ ನಡೆದ ಒಂದು ದಿನದ ರಾಷ್ಟ್ರೀಯ ಬಹುವಿಷಯಗಳ ಸಂಶೋಧನಾ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡುತ್ತಿದ್ದರು.

ನಾನು ದಶಕಗಳ ಕಾಲ ಪ್ರಧಾನ ಮಂತ್ರಿಗಳ ಭೂವಿಜ್ಞಾನ ಇಲಾಖೆ ಜೊತೆಗೂಡಿ ಮೋಡ ಬಿತ್ತನೆ ಸಂಶೋಧನೆ ನಡೆಸಿದೆ, ಅದರಿಂದ ಮಳೆ ಬರುವ ಪ್ರಮಾಣ ಎಷ್ಟು, ನೈಸರ್ಗಿಕವಾಗಿ ಅವಘಡಗಳು ಆಗಬಹುದಾ, ಅದಕ್ಕೆ ಪರಿಹಾರವೇನು ಎಲ್ಲ ರೀತಿ ಸಂಶೋಧನೆ ಮಾಡಿ ಮೋಡ ಬಿತ್ತನೆ ಮಾಡಿ ದೇಶದಲ್ಲಿ ಬರಬಹುದಾದ ಬರಗಾಲ ತಡೆಯುವ ಪ್ರಯತ್ನ ಮಾಡಿದೆ. ಯಶಸ್ಸು ಸಹ ಕಂಡೆ ಎಂದು ಶಾಸಕ ಪ್ರಕಾಶ ಕೋಳಿವಾಡ ತಮ್ಮ ಸಾಧನೆ ಹಂಚಿಕೊಂಡರು.

ಬಯೋಡೇಟಾ ಕೊಡಿ ಕೆಲಸ ಪಡೆಯಿರಿ ಎನ್ನುವುದರೊಂದಿಗೆ ತಾಲ್ಲೂಕಿನ ಯುವಕರ ಸ್ಥಿತಿಗತಿ ಅರಿತೆ ಆ ಮೂಲಕ ಅವಶ್ಯವಿರುವ ಉದ್ಯೋಗ ದೊರಕಿಸಿಕೊಡುವ ಪ್ರಯತ್ನ ಮಾಡಿದೆ. ಇದು ಸಂಶೋಧನೆ ಇದ್ದಂತೆ ಅದನ್ನ ನನ್ನ ಪಿಕೆಕೆ ಕಛೇರಿಯಲ್ಲಿ ಕೊಳೆಯಲು ಬಿಡದೆ ಅದು ಇಲ್ಲಿನ ಯುವಶಕ್ತಿಯ ಬದುಕಿಗೆ ದಾರಿಯಾಗುವಂತೆ ಮಾಡಿದೆ. ರಾಜಕಾರಿಣಿಗಳು ಸಂಶೋಧಕರಾಗಬಹುದು ಎಂದು ಅರಿತೆ ಎಂದು ಶಾಸಕರು ಹೇಳಿದರು.

ವಿಜಯಪುರದ ವಿಶ್ವವಿದ್ಯಾಲಯದ ರಿಜಿಸ್ಟರ್ ಬಿ.ಎಸ್. ನಾವಿ, ಚಲನಚಿತ್ರ ನಿರ್ಮಾಪಕಿ ಅರುಣರಾಜೇ ಪಾಟೀಲ್, ಸ್ಥಳೀಯ ಆಡಳಿತ ಮಂಡಳಿಯ ಬಸವರಾಜ ಪಟ್ಟಣಶೆಟ್ಟಿ ಸಂಘಟಕಿ ಅನುರಾಧ ವೇದಿಕೆಯಲ್ಲಿದ್ದರು, ವಿಪಿ ಲಿಂಗನಗೌಡ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ನಾರಾಯಣ ಸ್ವಾಗತಿಸಿದರು. ಕಾರ್ಯದರ್ಶಿ ಡಾ. ಎಸ್.ಎಲ್. ಕಾರಿವಾಡ ಪರಿಚಯಿಸಿ, ವಂದನಾರ್ಪಣೆ ಮಾಡಿದರು.

# ಅನುದಾನ ನೀಡಲು ಮುಖ್ಯಮಂತ್ರಿಗೆ ಕರ್ನಾಟಕ ಲೇಖಕಿಯರ ಸಂಘದ ಮನವಿ

ದಾವಣಗೆರೆ, ಜೂ. 30 - ಬಜೆಟ್‌ನಲ್ಲಿ ಲೇಖಕಿಯರ ಸಂಘಕ್ಕೆ ಹೆಚ್ಚಿನ ಅನುದಾನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕರ್ನಾಟಕ ಲೇಖಕಿಯರ ಸಂಘ ಒತ್ತಾಯಿಸಿದೆ. ಈ ಸಂಬಂಧ ರಾಜ್ಯಸಭಾ ಸದಸ್ಯ ಡಾ. ಎಲ್. ಹನುಮಂತಯ್ಯ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿಗಳನ್ನು ಇಂದು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಲಾಯಿತು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಶ್ರೀಮತಿ ಎಚ್.ಎಲ್. ಪುಷ್ಪ, ಮಾಜಿ ಸಚಿವರಾದ ಶ್ರೀಮತಿ ಲಲಿತಾ ನಾಯಕ್, ಹಿರಿಯ ಲೇಖಕರಾದ ಶ್ರೀಮತಿ ಕಮಲಾ ಹಂಪನಾ, ಶ್ರೀಮತಿ ವಸುಂಧರಾ ಭೂಪತಿ, ಶ್ರೀಮತಿ ಆಶಾದೇವಿ, ಶ್ರೀಮತಿ ಇಂದಿರಾ ಕೃಷ್ಣಪ್ಪ ಮತ್ತಿತರರು ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಿದರು.



॥ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ತಾ॥, ಬಸಾಪುರ ಗ್ರಾಮದ ವಾಸಿ ದಿ॥ ಶ್ರೀಮತಿ ಲಲಿತಮ್ಮ, ದಿ॥ ಶ್ರೀ ಸಿದ್ದರಾಮಪ್ಪ ಇವರ ಸೊಸೆಯಾದ

**ಶ್ರೀಮತಿ ನಾಗರತ್ನ ಮತ್ತು ಮಕ್ಕಳು ಹಾಗೂ ಸಹೋದರರು**

ಮಾಡುವ ವಿಜ್ಞಾಪನೆಗಳು.
ದಿನಾಂಕ : 23.06.2023ನೇ ಶುಕ್ರವಾರ ಬೆಳಗಿನ ಜಾವ 05.00 ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಹೆಚ್.ಎಸ್. ಶಿವಕುಮಾರ್**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 01.07.2023ನೇ ಶನಿವಾರ ಮಧ್ಯಾಹ್ನ 12.00 ಕ್ಕೆ ಬಸಾಪುರ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

**ಶ್ರೀಮತಿ ಹೆಚ್.ಎಸ್. ನಾಗರತ್ನ ಮತ್ತು ಮಕ್ಕಳು ಹೊಳೆಹೊನ್ನೂರು ಸಹೋದರರು, ಸಹೋದರಿಯರು, ಮೊಮ್ಮಕ್ಕಳು, ಬಸಾಪುರ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಫೋನ್ : 84533 76202**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**4ನೇ ಪುಣ್ಯಸ್ಮರಣೆ**



**ದಿ॥ ಶ್ರೀ ಮತ್ತೋಡ ಮಠದ ಮಲ್ಲಿಕಾರ್ಜುನಯ್ಯ**

ಬಿ.ಎಸ್.ಎನ್.ಎಲ್. ನಿವೃತ್ತ ನೌಕರರು, ಸದಾ ನೀವು ಹಾಕಿಕೊಟ್ಟ ದಾರಿಯಲ್ಲಿ ಸಾಗುತ್ತಿರುವ ನಿಮ್ಮ ಕುಟುಂಬ ವರ್ಗದವರು

**ಶ್ರೀಮತಿ ಪುಷ್ಪಾವತಿ ಮತ್ತು ಮಕ್ಕಳು, ಅಳಿಯಂದಿರು ಹಾಗೂ ಸೊಸೆಯಂದಿರು ಮತ್ತು ಮೊಮ್ಮಕ್ಕಳು, ದಾವಣಗೆರೆ.**

## ಬೆಸ್ಕಾಂ ಲೈನ್‌ಮ್ಯಾನ್ ಕೆ.ಷಣ್ಮುಖಪ್ಪ ನಿಧನ



ದಾವಣಗೆರೆ ವಿದ್ಯಾರ್ಥಿ ಭವನ ಹತ್ತಿರ ಕೆ.ಇ.ಬಿ. ಕ್ವಾರ್ಟಸ್ ವಾಸಿ ಬೆಸ್ಕಾಂ ಲೈನ್‌ಮ್ಯಾನ್ ಕೆ.ಷಣ್ಮುಖಪ್ಪ (49) ಇವರು ದಿನಾಂಕ 30.6.2023ರ ಶುಕ್ರವಾರ ರಾತ್ರಿ 8.15 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 1.7.2023ರ ಶನಿವಾರ ಮಧ್ಯಾಹ್ನ 12.30ಕ್ಕೆ ನಗರದ ಆರ್ ಹೆಚ್. ಬೃಂದಾವನದಲ್ಲಿ ನೆರವೇರಲಿದೆ.

# ಮೃತ ಸನ್ಯಾಸಿ ಮನೆಯಲ್ಲಿ 30 ಲಕ್ಷ ಪತ್ತೆ

ಹೊಳಲ್ಕೆರೆ, ಜು. 30- ಕಳೆದ ವಾರ ಮೃತಪಟ್ಟಿದ್ದ ಸನ್ಯಾಸಿಯೊಬ್ಬರ ಮನೆಯಲ್ಲಿ 30 ಲಕ್ಷ ರೂ.ಗೂ ಅಧಿಕ ಹಣ ಪತ್ತೆಯಾಗಿದೆ.

ನಂದೀಶ್ವರ ಮಠದ ಅನುಯಾಯಿಯಾಗಿದ್ದ ಗಂಗಾಧರಯ್ಯ ಶಾಸ್ತ್ರಿ ನಿವಾಸದಲ್ಲಿ ನೋಟು ತುಂಬಿದ ಹಲವು ಚೀಲಗಳು, ಹಣ ತುಂಬಿದ ಕೊಡವೊಂದು ಸಿಕ್ಕಿದೆ. ಒಂಟಿಯಾಗಿ ಬದುಕು ನಡೆಸುತ್ತಿದ್ದ ಈ ಸನ್ಯಾಸಿ, ಶಾಸ್ತ್ರ ಹೇಳುವುದು, ಶುಭ ಕಾರ್ಯದ ಪೂಜೆ ಮಾಡಿಸುತ್ತಿದ್ದರು. ಇವರಿಗೆ 16 ಎಕರೆ ಜಮೀನಿದ್ದು, 4 ಎಕರೆ ತೆಂಗಿನ ತೋಟ, ಗದ್ದೆ ಹೊಂದಿದ್ದರು. ಕೃಷಿ, ಮತ್ತಿತರೆ ಆದಾಯದಿಂದ ಬಂದ ಸುಮಾರು 30 ಲಕ್ಷಕ್ಕೂ ಅಧಿಕ ಹಣವನ್ನು ಮನೆಯಲ್ಲಿ ಕೂಡಿಟ್ಟಿದ್ದರು. 10 ರೂ., 20 ರೂ., 50 ರೂ., 100 ರೂ., 200 ರೂ. ಹಾಗೂ 500 ರೂ. ಮುಖಬೆಲೆಯ ನೋಟುಗಳು ಸನ್ಯಾಸಿಯ ಮನೆಯಲ್ಲಿ ಸಿಕ್ಕಿವೆ. ಗಂಗಾಧರಯ್ಯ ಶಾಸ್ತ್ರಿ ಮನೆಯಲ್ಲಿ ತೆಂಗಿನಕಾಯಿ ರಾಶಿ ಕೆಳಗಡೆ ಹಾಗೂ ಅಟ್ಟದ ಮೇಲೆ ಹಣ ಪತ್ತೆಯಾಗಿದೆ.

ಗಂಗಾಧರಯ್ಯ ಅವರು ತೆಂಗಿನ ತೋಟದಿಂದ ಬಂದ ಆದಾಯ ಹಾಗೂ ಭಕ್ತರು ನೀಡಿದ ಕಾಣಿಕೆಯನ್ನು ಹಲವು ವರ್ಷಗಳಿಂದ ಮನೆಯಲ್ಲಿಯೇ ಸಂಗ್ರಹಿಸಿಟ್ಟಿದ್ದರು ಎಂದು ಹೇಳಲಾಗಿದೆ. ಅವರಿಗೆ ವಾರಸುದಾರರಿಲ್ಲದ ಕಾರಣ, ಮುಂದಿನ ಶುಕ್ರವಾರ ಅಂದರೆ ಜುಲೈ 7ರಂದು ಭಕ್ತರ ಸಭೆ ಕರೆದು ಸಮಿತಿ ರಚಿಸಲು ನಿರ್ಧರಿಸಲಾಗಿದೆ. ಗಂಗಾಧರಯ್ಯ ಅವರ ಜಮೀನಿನಲ್ಲಿ ಗದ್ದುಗೆ ನಿರ್ಮಿಸಿ ಭಕ್ತರ ಪೂಜೆಗೆ ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ. ಉಳಿದ ಹಣವನ್ನು ಟ್ರಸ್ಟ್ ರಚಿಸಿ ಸಮಾಜಸೇವೆಗೆ ಬಳಸಲು ಭಕ್ತರು ಮುಂದಾಗಿದ್ದಾರೆ.

# ರೈಲಿಗೆ ಬಿದ್ದು ಅಪರಿಚಿತ ಯುವಕನ ಸಾವು

ದಾವಣಗೆರೆ, ಜೂ.30- ತೋಳಹುಣಸೆ ಮತ್ತು ಕೊಡಗನೂರು ರೈಲು ನಿಲ್ದಾಣಗಳ ಮಧ್ಯೆ ಅಪರಿಚಿತ ಯುವಕ ಸುಮಾರು 30-35 ವರ್ಷ ವಯಸ್ಸಿನ ಯುವಕನ ಶವ ದೊರೆತಿದೆ. ಮೃತನು ಗೋಧಿ ಮೈ ಬಣ್ಣ, ಸಾಧಾರಣ ಮೈಕಟ್ಟು, ಕೋಲು ಮುಖ ಹೊಂದಿದ್ದು, ಆತನ ಬಲಗೈ ಅಂಗೈ ಮೇಲೆ R ಎಂದು ಮೊಣಕೈ ಕೆಳಗೆ HS ಎಂಬ ಹಚ್ಚೆ ಗುರುತು ಇರುತ್ತದೆ. ಎಡಗಡೆಯ ಎದೆ ಭಾಗದ ಮೇಲೆ ರತ್ನಮ್ಮ ಎಂಬ ಹಚ್ಚೆ ಗುರುತು ಇದೆ. ಬಲಗೈ ಅಂಗೈ ಹತ್ತಿರ ಕಪ್ಪು ದಾರವನ್ನು ಕಟ್ಟಿಕೊಂಡಿರುತ್ತಾನೆ ಹಾಗೂ ಬಲಗಾಲ ಪಾದದ ಭಾಗದಲ್ಲಿ ಕಪ್ಪು ದಾರ ಕಟ್ಟಿರುತ್ತಾನೆ. ಮೃತನು ನೀಲಿ ಬಣ್ಣದ ತುಂಬು ತೋಳಿನ ರೆಡಿಮೇಡ್ ಅಂಗಿ, ಕಪ್ಪು ಬಣ್ಣದ ಪ್ಯಾಂಟ್, ಕಂದು ಬಣ್ಣದ ಕಾಚಾ ಧರಿಸಿರುತ್ತಾನೆ. ಸಂಬಂಧಪಟ್ಟವರು ದಾವಣಗೆರೆ ರೈಲ್ವೆ ಪೊಲೀಸ್ ಠಾಣೆಗೆ ಸಂಪರ್ಕಿಸುವುದು. ದೂರವಾಣಿ 08192-259643, 080-22871291, ಮೊಬೈಲ್ 9480892123.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಕೊಟ್ಟ ಜವಾಬ್ದಾರಿ ಸಮರ್ಥವಾಗಿ ನಿಭಾಯಿಸುವೆ

## ಮಳಲಕೆರೆ ಗ್ರಾಮದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ

ದಾವಣಗೆರೆ, ಜೂ. 30- ಮತದಾರ ಪ್ರಭುಗಳು ಇವತ್ತು ನನ್ನನ್ನು ಶಾಸಕನಾಗಿ ಮಾಡಿ ನನಗೆ ದೊಡ್ಡ ಜವಾಬ್ದಾರಿ ಕೊಟ್ಟಿದ್ದೀರಿ. ಆ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವ ಮೂಲಕ ನಿಮ್ಮ ಸಮಸ್ಯೆಗಳಿಗೆ, ನಿಮ್ಮ ನೋವುಗಳಿಗೆ ಪರಿಹಾರ ನೀಡಿ ಬೆನ್ನೆಲುಬಾಗಿ ನಿಲ್ಲುತ್ತೇನೆ ಎಂದು ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.



ತಾಲ್ಲೂಕಿನ ಮಳಲಕೆರೆ ಗ್ರಾಮದಲ್ಲಿ ಗುರುವಾರ ಗ್ರಾಮಸ್ಥರು ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಶಾಸಕರಾಗಿ ಗ್ರಾಮಕ್ಕೆ ಮೊದಲ ಬಾರಿಗೆ ಭೇಟಿ ನೀಡಿದಾಗ ಅದ್ಧೂರಿ ಸ್ವಾಗತ ನೀಡಿ ಗೌರವಿಸಿರುವುದು ನನಗೆ ಸಂತಸ ತಂದಿದೆ. ನಿಮ್ಮೆಲ್ಲರ ಸಹಕಾರದೊಂದಿಗೆ ಕ್ಷೇತ್ರದ ಮತ್ತು ಗ್ರಾಮದ ಅಭಿವೃದ್ಧಿಗೆ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಕ್ಷೇತ್ರದಲ್ಲಿ ಏನಾದರೂ ಸಮಸ್ಯೆಗಳು ಇದ್ದರೆ ನನ್ನ ಗಮನಕ್ಕೆ ತನ್ನಿ, ಅದು ಯಾವುದೇ ಸಮಸ್ಯೆಗಳಿದ್ದರೂ ಪ್ರಾಮಾಣಿಕವಾಗಿ ಸ್ಪಂದಿಸುವ ಕೆಲಸ ಮಾಡುತ್ತೇನೆ. ನಾನೇ ಏನೇ ತಪ್ಪು ಮಾಡಿದರೂ ಅದನ್ನು ತಿದ್ದುವ ಜವಾಬ್ದಾರಿ ನಿಮಗೆ ಇದೆ. ಅಂತಹ ತಪ್ಪುಗಳು ಇದ್ದರೆ ಅದನ್ನು ತಿದ್ದಿಕೊಂಡು ಜನರ ಸಮಸ್ಯೆಗಳಿಗೆ ಪರಿಹಾರ ನೀಡುವ ಕೆಲಸ ಮಾಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ತಾ.ಪಂ. ಮಾಜಿ ಸದಸ್ಯ ಮುರುಗೇಂದ್ರಪ್ಪ, ಮಾಜಿ ಉಪಾಧ್ಯಕ್ಷ ಎಚ್.ಎಂ.ಗೌಡ, ಎಂ.ಎಸ್.ಮಹೇಶ್ವರಯ್ಯ, ಟಿ.ಜಿ.ಉಮಾಪತಿ, ಬಿ.ಎಸ್.ಶೇಖರಪ್ಪ, ಬಿ. ಎಸ್.ಭರಮಪ್ಪ, ಚಮನ್ ಸಾಬ್, ಕೃಷ್ಣಮೂರ್ತಿ, ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ.ನಾಗರಾಜ್, ಜಿ.ಪಂ. ಮಾಜಿ ಸದಸ್ಯ ತ್ಯಾವಣಿಗೆ ಗೋವಿಂದಸ್ವಾಮಿ, ಮಾಯಕೊಂಡ ಜಿ.ಪಂ. ಮಾಜಿ ಸದಸ್ಯ ವೆಂಕಟೇಶ್, ತ್ಯಾವಣಿಗಿ ಪರಶುರಾಮ್, ತೊಳಹುಣಿಸೆ ಶೇಖರಪ್ಪ, ಬಿ.ಎಚ್.ನಂದ್ಯಪ್ಪ ಅತ್ತಿಗೆರೆ, ದೇವೇಂದ್ರಪ್ಪ ಅಗಸನಕಟ್ಟೆ ಇನ್ನಿತರರಿದ್ದರು.

ಕಾರ್ಯಕ್ರಮದ ಪೂರ್ವದಲ್ಲಿ ಅಣಬೇರು ಗ್ರಾಮಕ್ಕೆ ಭೇಟಿ ನೀಡಿದಾಗ ಗ್ರಾಮದ ಮಲ್ಲಮ್ಮನವರ ಮನೆಯು ಸಂಪೂರ್ಣ ಹಾನಿಯಾಗಿದ್ದು, ಮನೆ ನಿರ್ಮಿಸಿ ಕೊಡುವಂತೆ ಗ್ರಾಪಂ ಸದಸ್ಯರಿಗೆ, ಪಿಡಿಓಗೆ ಸೂಚನೆ ನೀಡಿದರು. ಬಳಿಕ ಮಳಲಕೆರೆ ಗ್ರಾಪಂ ಕಚೇರಿಗೆ ತೆರಳಿ ಪರಿಶೀಲನೆ ನಡೆಸಿದರು.

# ಸೋಮೇಶ್ವರ ಶಾಲೆಯಲ್ಲಿ ಉಚಿತ ವ್ಯಕ್ತಿತ್ವ ವಿಕಸನ ಶಿಬಿರ



ದಾವಣಗೆರೆ, ಜೂ. 30- ಏಕಾಗ್ರತೆ ಹೇಗೆ ಹೆಚ್ಚಾಗುತ್ತದೆ, ದೀರ್ಘ ಉಸಿರಾಟದ ಲಾಭಗಳನ್ನು, ರೋಗ ನಿರೋಧಕ ಶಕ್ತಿಯ ಹೆಚ್ಚಳಕ್ಕೆ ಸುಲಭ, ದೀರ್ಘ ಉಸಿರಾಟ ವಿಧಾನಗಳನ್ನು, ಪರೀಕ್ಷಾ ಭಯ ನಿವಾರಿಸಲು, ಸುಲಭವಾಗಿ ಓದುವ ವಿಧಾನಗಳು ಕಡಿಮೆ ಅವಧಿಯಲ್ಲಿ ಹೇಗೆ ಅಭ್ಯಾಸ ಮಾಡಿ ನೆನಪಿನ ಶಕ್ತಿ ಹೆಚ್ಚಿಸಿಕೊಳ್ಳಬಹುದು ಎಂಬುದನ್ನು ಅಂತರರಾಷ್ಟ್ರೀಯ ಯೋಗ ಗುರು, ವ್ಯಕ್ತಿತ್ವ ವಿಕಸನ ತರಬೇತುದಾರರಾದ ಗೀತಮ್ಮಾಜಿ ತಿಳಿಸಿದರು.

ನಗರದ ಸೋಮೇಶ್ವರ ವಿದ್ಯಾಲಯದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ವ್ಯಕ್ತಿತ್ವ ವಿಕಸನದ ಉಚಿತ ತರಬೇತಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಅವರು ಮಾತನಾಡುತ್ತಿದ್ದರು.

ಸ್ಮರಣಶಕ್ತಿ, ಏಕಾಗ್ರತೆ, ಮನಸ್ಸಿನ ನಿಗ್ರಹಕ್ಕೆ ಸುಲಭ ಆಕ್ಯುಪ್ರೆಷರ್ ಚಿಕಿತ್ಸೆಯ ಬಗ್ಗೆ ಗೀತಮ್ಮಾಜಿ ಪ್ರಾಯೋಗಿಕವಾಗಿ ತರಬೇತಿ ನೀಡಿ ವಿದ್ಯಾರ್ಥಿಗಳನ್ನು ಆಶ್ಚರ್ಯ ಚಕಿತರನ್ನಾಗಿಸಿದರು.

# ವಾಲ್ಮೀಕಿ ಸಮುದಾಯ ಭವನದ ಅಭಿವೃದ್ಧಿಗೆ 1 ಕೋಟಿ ಅನುದಾನ



### ಹೊನ್ನಾಳಿ ಶಾಸಕ ಶಾಂತನಗೌಡ ಭರವಸೆ

ಹೊನ್ನಾಳಿ, ಜೂ.30- ಮಹರ್ಷಿ ವಾಲ್ಮೀಕಿ ರಾಮಾಯಣದಂತಹ ಬೃಹತ್ ಹಾಗೂ ಪವಿತ್ರ ಗ್ರಂಥ ರಚಿಸಿದ್ದರಿಂದಾಗಿ ಇಡೀ ಜಗತ್ತಿನಲ್ಲಿ ವಾಲ್ಮೀಕಿ ಸಮುದಾಯವನ್ನು ಗುರುತಿಸುವಂತಾಗಿದೆ ಎಂದು ಶಾಸಕ ಡಿ.ಜಿ.ಶಾಂತನಗೌಡ ಹೇಳಿದರು.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ಹೊನ್ನಾಳಿ ತಾಲ್ಲೂಕು ಶ್ರೀ ವಾಲ್ಮೀಕಿ ನಾಯಕ ಸಂಘದ ವತಿಯಿಂದ ಮೊನ್ನೆ ಹಮ್ಮಿಕೊಂಡಿದ್ದ ನೂತನ ಶಾಸಕರ ಸನ್ಮಾನ ಸಮಾರಂಭದಲ್ಲಿ ವಾಲ್ಮೀಕಿ ಸಮಾಜದ ವತಿಯಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಪ್ರಸ್ತುತ ಹೊನ್ನಾಳಿಯಲ್ಲಿ ಯಾವುದಾದರು ಒಂದು ಸಮುದಾಯದ ವ್ಯವಸ್ಥಿತ ಸಮುದಾಯ ಭವನ ಇದೆ ಎಂದಾದರೇ ಆದು ವಾಲ್ಮೀಕಿ ಸಂಘದ ಸಮುದಾಯ ಭವನ ಎಂದ ಅವರು, ಈ ಸಮುದಾಯ ಭವನದ ಅಭಿವೃದ್ಧಿಗೆ ಒಂದು ಕೋಟಿ ಅನುದಾನ ಕೊಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಈ ಹಿಂದೆ 2013ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೇಶದಲ್ಲಿಯೇ ಪ್ರಥಮ ಎನಿಸುವಂತೆ ಸುಮಾರು 6 ಕೋಟಿ ಎಸ್ಸಿ-ಎಸ್ಟಿ ಜನ ಸಮುದಾಯಕ್ಕೆ ಆಯ-ವ್ಯಯದಲ್ಲಿ ಶೇ. 24.1 ರಷ್ಟು ಅನುದಾನ ಕಾಯ್ದಿರಿಸುವ ಕಾಯ್ದೆ ಜಾರಿ ಮಾಡಿದ್ದು, ಈ ಕೀರ್ತಿ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಈಗಾಗಲೇ ಶಕ್ತಿ ಯೋಜನೆ ಅನುಷ್ಠಾನಗೊಂಡಿದೆ. ಇಷ್ಟರಲ್ಲೇ 200 ಯೂನಿಟ್ ಉಚಿತ ವಿದ್ಯುತ್‌ಗೆ ಕೂಡ ನೋಂದಣಿ ನಡೆಯುತ್ತಿದ್ದು, ಜುಲೈ ನಂತರ ಇದೂ ಕೂಡ ಅನುಷ್ಠಾನಗೊಳ್ಳಲಿದೆ, ಮನೆ ಯಜಮಾನಿಗೆ ರೂ. 2 ಸಾವಿರ, 10 ಕೆ.ಜಿ ಅಕ್ಕಿ ವಿತರಣೆ ಯೋಜನೆ ಸೇರಿದಂತೆ ಹಂತ ಹಂತವಾಗಿ ಸರ್ಕಾರ ನೀಡಿರುವ ಎಲ್ಲಾ ಭರವಸೆಗಳನ್ನು ಈಡೇರಿಸಲಾಗುವುದು ಎಂದು ಹೇಳಿದರು.

ತಾಲ್ಲೂಕು ಶ್ರೀ ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷ ಶಿವಾನಂದಪ್ಪ ಮಾತನಾಡಿ, 2013ರಲ್ಲಿ ಶಾಂತನಗೌಡರು ಸಮುದಾಯ ಭವನಕ್ಕೆ 50 ಲಕ್ಷ ನೀಡಿದ್ದರು. ನಂತರದಲ್ಲಿ ಶಾಸಕರಾಗಿದ್ದ ರೇಣುಕಾಚಾರ್ಯ ಅವರೂ ಕೂಡ ತಮ್ಮ ಎರಡು ಅವಧಿಯಲ್ಲಿ ತಲಾ 1 ಕೋಟಿಯಂತೆ ಒಟ್ಟು 2 ಕೋಟಿ ಅನುದಾನವನ್ನು ಮಂಜೂರು ಮಾಡಿಸಿ ಕೊಟ್ಟಿದ್ದು, ಇದೀಗ ಸಮುದಾಯ ಭವನ ಕಟ್ಟಡ ನಿರ್ಮಾಣವಾಗಿದ್ದರೂ ಕೂಡ ಇನ್ನೂ ಅನೇಕ ಅಭಿವೃದ್ಧಿ ಕೆಲಸಗಳು ಬಾಕಿ ಇದ್ದು, ಇದಕ್ಕಾಗಿ ಈಗಿನ ಶಾಸಕ ಡಿ.ಜಿ.ಶಾಂತನಗೌಡ ಅವರು 1 ಕೋಟಿ ಅನುದಾನ ಮಂಜೂರು ಮಾಡಿಸಿಕೊಡಬೇಕೆಂದು ಸಮಾಜದ ವತಿಯಿಂದ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಗೌರವಾಧ್ಯಕ್ಷ ಕುಳಗಟ್ಟೆ ರಂಗನಾಥ್, ಕೋಣನತಲೆ ನಾಗಪ್ಪ, ಮಾಜಿ ಅಧ್ಯಕ್ಷ ತಿಮ್ಮೇನಹಳ್ಳಿ ಚಂದಪ್ಪ, ಉಪಾಧ್ಯಕ್ಷ ಕೋಣನತಲೆ ನಾಗೇಂದ್ರಪ್ಪ, ಕ್ಯಾಸಿನಕೆರೆ ಶೇಖರಪ್ಪ ಹಾಗೂ ಅಬಕಾರಿ ಇಲಾಖೆಯ ಅಧಿಕಾರಿ ಮುರುಡೇಶ್, ವಾಲ್ಮೀಕಿ ನೌಕರರ ಸಂಘದ ಅಧ್ಯಕ್ಷರಾದ ಶಿಕ್ಷಕ ಆಂಜನೇಯ ಸೇರಿದಂತೆ ಅನೇಕರು ಮಾತನಾಡಿದರು.

ತಾ. ವಾಲ್ಮೀಕಿ ಸಂಘದ ಪದಾಧಿಕಾರಿಗಳಾದ ಸಿ.ಹನುಮಂತಪ್ಪ, ಎಂ.ಆರ್. ಹನುಮಂತಪ್ಪ, ಟಿ. ಮಲ್ಲಪ್ಪ, ನಾಗರಾಜ್, ಡಿ.ಬಿ.ರಮೇಶ್, ಲಿಂಗಾಪುರ ಪರಶುರಾಮ, ಗಂಡುಗಲಿ ಮಂಜಪ್ಪ, ಮಾರಿಕೊಪ್ಪದ ತಿಮ್ಮಪ್ಪ, ಹೊನ್ನಾಳಿ ಪುರಸಭಾ ಸದಸ್ಯ ರಾಜೇಂದ್ರ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರುದ್ರಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

# ಅಂಕ ಗಳಿಸಿ ಉದ್ಯೋಗ ಪಡೆಯುವುದಷ್ಟೇ ಜೀವನವಲ್ಲ

## ಹರಿಹರದ ಎಸ್.ಜೆ.ವಿ.ಪಿ ಪದವಿ ಕಾಲೇಜಿನಲ್ಲಿ ಶಿವಮೊಗ್ಗದ ಜಿ.ಎಸ್.ನಟೇಶ್ ಕಿವಿಮಾತು

ಹರಿಹರ, ಜೂ.30- ಇಂದಿನ ವಿದ್ಯಾರ್ಥಿಗಳು ಉತ್ತಮ ಅಂಕ ಗಳಿಸಿ ಉದ್ಯೋಗ ಪಡೆಯುವುದೇ ಜೀವನ ಎಂದು ಭಾವಿಸಬಾರದು ಎಂದು ಶಿವಮೊಗ್ಗದ ನಿವೃತ್ತ ಉಪನ್ಯಾಸಕ ಜಿ.ಎಸ್. ನಟೇಶ್ ಕಿವಿಮಾತು ಹೇಳಿದರು.



ಇಲ್ಲಿನ ಎಸ್.ಜೆ.ವಿ.ಪಿ ಪದವಿ ಮಹಾವಿದ್ಯಾಲಯದಲ್ಲಿ ಜರುಗಿದ ಪ್ರಸಕ್ತ ಸಾಲಿನ ಶೈಕ್ಷಣಿಕ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು.

ಸಂಬಂಧಗಳಿಗೆ ಹೆಚ್ಚಿನ ಬೆಲೆ ನೀಡಬೇಕು, ನಾಡು, ನುಡಿ ಕಟ್ಟುವಲ್ಲಿ ಪ್ರತಿಯೊಬ್ಬರು ನಿರಂತರ ಶ್ರಮ ಪಡುತ್ತಲೇ ಇರಬೇಕು. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧವು ಅತ್ಯಂತ ಆತ್ಮೀಯ ಸ್ನೇಹಿತನಂತೆ ಇರಬೇಕಾದ ಅನಿವಾರ್ಯತೆ ಇದೆ ಎಂದು ತಿಳಿಸಿದರು.

ಈ ಶೈಕ್ಷಣಿಕ ವರ್ಷದಲ್ಲಿ ನಮ್ಮ ಪದವಿ ಕಾಲೇಜಿನ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಮಟ್ಟದಲ್ಲಿ ಶೈಕ್ಷಣಿಕ ಮತ್ತು ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ ಎಂದು ಪ್ರಶಂಸಿಸಿದ ಸಂಸ್ಥೆಯ ಕಾರ್ಯದರ್ಶಿ ಆರ್.ಟಿ.ಪ್ರಶಾಂತ್ ದುಗ್ಗತ್ತಿಮಠ್, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಸಂಸ್ಥೆಯ ಉಪಾಧ್ಯಕ್ಷ ಡಿ.ಎಂ. ಹಾಲಸ್ವಾಮಿ, ನಿರ್ದೇಶಕ ಎನ್.ಎಂ.ತಿಪ್ಪೇಸ್ವಾಮಿ, ಎನ್.ಹೆಚ್. ಪಾಟೀಲ್, ಪ್ರಾಚಾರ್ಯ ಶ್ರೀಮತಿ ಶಿವಗಂಗಮ್ಮ, ಉಪನ್ಯಾಸಕರಾದ ಡಾ.ರಮೇಶ್ ಪರ್ವತಿ, ಡಾ.ದಿವಾಕರ್. ಡಿ.ಟಿ. ಮಂಜುನಾಥ್, ಭರಮಪ್ಪ, ಸಿದ್ದಯ್ಯ, ಮಂಜುನಾಥ್ ಸಜ್ಜನ್, ವಿಶಾಲ್ ಬೆಂಚ್ಚಳಿ, ಆಕಾಶ್, ನಳಿನಿ, ರಶ್ಮಿ, ನಾಜೀಯ ಬೇಗಂ, ಆಶಾ, ಪ್ರಿಯಾಂಕ ಉಪಸ್ಥಿತರಿದ್ದರು. ಐ.ಕ್ಯೂ.ಎ.ಸಿ ಸಂಯೋಜಕ ಡಾ.ವೀರಣ್ಣ ಶೆಟ್ಟರ್ ವಾರ್ಷಿಕ ವರದಿ ಓದಿದರು.

### ಗ್ಯಾರಂಟಿಗಳ ಅನುಷ್ಠಾನಕ್ಕೆ ಆಗ್ರಹಿಸಿ 4ರಂದು ಧರಣಿ

(1ನೇ ಪುಟದಿಂದ) ಅಂಶಗಳನ್ನು ಚಾಚೂ ತಪ್ಪದೇ ಅನುಷ್ಠಾನಕ್ಕೆ ತರಲು ಅವರು ಆಗ್ರಹಿಸಿದರು. ಈ ಕುರಿತು ಪಕ್ಷದ ಮುಖಂಡರ ಸಭೆಯಲ್ಲಿ ಚರ್ಚಿಸಿದ್ದಾಗಿ ಹೇಳಿದ ಅವರು, ಭರವಸೆ ಕೊಟ್ಟಂತೆ 10 ಕೆಜಿ ಅಕ್ಕಿ ಕೊಡಬೇಕು. ಎಲ್ಲ ಪದವೀಧರ ನಿರುದ್ಯೋಗಿಗಳಿಗೆ 3 ಸಾವಿರ ಭತ್ಯೆ, ಡಿಪ್ಲೋಮಾ ಮಾಡಿ ನಿರುದ್ಯೋಗಿ ಆಗಿರುವವರಿಗೆ 1500 ರೂ. ಕೊಡಬೇಕು. 200 ಯೂನಿಟ್ ವಿದ್ಯುತ್ ಕೊಡಲೇಬೇಕು. 80 ಯೂನಿಟ್ ಎಂಬ ಕಂಡೀಷನ್ ರದ್ದು ಮಾಡಬೇಕೆಂದು ಒತ್ತಾಯಿಸಿದರು.

ಅವರೇ ಭರವಸೆ ನೀಡಿದಂತೆ ಎಲ್ಲಾ ಮಹಿಳೆಯರಿಗೆ 2 ಸಾವಿರ ರೂ. ಕೊಡಬೇಕು. ಕರೆಂಟ್ ಬಿಲ್ ತೀವ್ರವಾಗಿ ಹೆಚ್ಚಾಗಿದ್ದು, ದರ ಏರಿಕೆಯನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸುವುದಾಗಿ ತಿಳಿಸಿದರು. ಜು. 4ರಂದು ಸದನದ ಒಳಗೆ ಮತ್ತು ಹೊರಗಡೆ ನಾನು ಮತ್ತು ಪಕ್ಷದ ಪ್ರಮುಖರು ಧರಣಿ ನಡೆಸಲಿದ್ದೇವೆ. ಪಕ್ಷಕ್ಕೆ ಮುಜುಗರ ಆಗುವ ಹೇಳಿಕೆಗಳನ್ನು ಯಾರೂ ಕೊಡಬಾರದು. ಯಾರು ಆ ರೀತಿ ಮಾತನಾಡಿದ್ದಾರೋ ಅವರ ಜೊತೆ ಚರ್ಚಿಸಿ ಇನ್ನು ಮುಂದೆ ಇಂತಹ ಘಟನೆ ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಲಾಗುವುದು. ಇಲ್ಲವಾದರೆ ಸೂಕ್ತ ಕ್ರಮವನ್ನು ಕೈಗೊಳ್ಳುವ ತೀರ್ಮಾನ ಮಾಡಿದ್ದೇವೆ ಎಂದು ಅವರು ಹೇಳಿದರು.

# ಪರಿಶಿಷ್ಟರರ ಮೇಲಿನ ದೌರ್ಜನ್ಯಕ್ಕೆ ತಕ್ಷಣ ಕ್ರಮಕ್ಕೆ ಜಿಲ್ಲಾಧಿಕಾರಿ ಕಾಪಶಿ ಸೂಚನೆ



ದಾವಣಗೆರೆ, ಜೂ.30- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದವರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳು ಕಂಡು ಬಂದಲ್ಲಿ ಅಂತಹ ಪ್ರಕರಣಗಳಲ್ಲಿ ತಕ್ಷಣವೇ ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಸೂಚಿಸಿದರು

ಅವರು ಶುಕ್ರವಾರ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂ ಗಣದಲ್ಲಿ ಜರುಗಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದ ಮೇಲಿನ ದೌರ್ಜನ್ಯ ತಡೆ ಮತ್ತು ನಿಯಮಗಳ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ಪ್ರಸಕ್ತ ವರ್ಷದ 2ನೇ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾತ್ರಿ ವೇಳೆ ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಶಾಲಾ ಆವರಣಗಳಲ್ಲಿ ಮದ್ಯ ಸೇವನೆ ಸೇರಿದಂತೆ ಕಾನೂನು ಬಾಹಿರವಾಗಿ ಯಾವುದೇ ಚಟುವಟಿಕೆಗಳು ನಡೆಯದಂತೆ ಮತ್ತು ಇಲ್ಲಿನ ಆವರಣದಲ್ಲಿ ಗಲೀಜು ಮಾ ಡುವವರ ವಿರುದ್ಧ ಪ್ರಕರಣ ದಾಖಲಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

**31 ಪ್ರಕರಣಗಳು ಬಾಕಿ :** ವಿಚಾರಣೆಯಲ್ಲಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಜನಾಂಗದ ದೌರ್ಜನ್ಯ ತಡೆ ನಿಯಮಗಳ ಹಾಗೂ ಅಧಿನಿಯಮದಡಿ ದಾಖಲಿಸಲ್ಪಟ್ಟ ಪ್ರಕರಣಗಳ ಬಗ್ಗೆ ಜಿಲ್ಲಾಧಿಕಾರಿ ಮಾಹಿತಿ ಪಡೆದರು. ಜನವರಿ 2023 ಕ್ಕಿಂತ ಮೊದಲು ದಾಖಲಾಗಿ ತನಿಖಾ ಹಂತದಲ್ಲಿರುವ 6 ಪ್ರಕರಣಗಳು, 2023ರಿಂದ ಜೂನ್ 27ರವರೆಗೆ 45 ಪ್ರಕರಣಗಳು ದಾಖಲಾ ಗಿದ್ದು, ತನಿಖಾ ಹಂತದಲ್ಲಿ 31 ಪ್ರಕರಣಗಳು ಬಾಕಿ ಉಳಿದಿದ್ದು, ಪರಿಹಾರಕ್ಕಾಗಿ 45 ಪ್ರಕರಣಗಳ ಪ್ರಸ್ತಾವನೆ ಸಲ್ಲಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ದೌರ್ಜನ್ಯ ಪ್ರಕರಣಗಳಲ್ಲಿ 2023 ರಿಂದ ಜೂನ್ ರವರೆಗೆ 77 ಪ್ರಕರಣಗಳು ದಾಖಲಾಗಿದ್ದು, ಸದರಿ ಪ್ರಕರಣಗಳಲ್ಲಿ 92 ಸಂತ್ರಸ್ಥರಿಗೆ ರೂ.86.5 ಲಕ್ಷ ಪರಿಹಾರ ಒದಗಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಕೆ. ನಾಗರಾಜ್ ಸಭೆಗೆ ಮಾಹಿತಿ ನೀಡಿದರು.

ಜಗಳೂರು ತಾಲ್ಲೂಕಿನ ಅನೇಕ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಶೌಚಾಲಯದ ಕೊರತೆ ಮತ್ತು ಸಾರ್ವಜನಿಕರಿಗೆ ಬಸ್ಸಿನ ವ್ಯವಸ್ಥೆಯನ್ನು ಕಲ್ಪಿಸುವಂತೆ ಕೋರಲಾಯಿತು.

ನಗರದ ಜೆ.ಎಚ್. ಪಟೇಲ್ ಬಡಾವಣೆಯಲ್ಲಿ ಮದ್ಯಪಾನ ಮಾಡುವವರ ಹಾವಳಿ ಹೆಚ್ಚಾಗಿದ್ದು ಮದ್ಯ ವ್ಯಸನಿಗಳು ಕುಡಿದು ಬಾಟಲಿಗಳನ್ನು ಎಲ್ಲೆಂದರಲ್ಲಿ ಬಿಸಾಡುತ್ತಿದ್ದಾರೆ. ಆದ್ದರಿಂದ ಸಿಸಿ ಕ್ಯಾಮೆರಾ ವ್ಯವಸ್ಥೆ ಮತ್ತು ಪೊಲೀಸ್ ಬಂದೋಬಸ್ತ್ ಮಾಡಲು ಸೂಚಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕೆ, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ವಕೀಲರ ಸಂಘದ ಜಿಲ್ಲಾಧ್ಯಕ್ಷ ರಾದ ಎಲ್. ಹೆಚ್ ಅರುಣ್‌ಕುಮಾರ್, ಸದಸ್ಯರಾದ ಕುಂದುವಾಡ ಮಂಜುನಾಥ್, ಉಮಾ, ಬಾಬಣ್ಣ ಉಪಸ್ಥಿತರಿದ್ದರು.

### ಮೇಕೆದಾಟು ಸಮೀಪ ಬೃಹತ್ ಅಣೆಕಟ್ಟು

(1ನೇ ಪುಟದಿಂದ) ಸಂಪನ್ಮೂಲ ಸಚಿವರಾಗಿದ್ದಾಗಲೇ ಯೋಜನಾ ವರದಿ ಸಿದ್ಧಪಡಿಸಿ ಅಣೆಕಟ್ಟು ನಿರ್ಮಾಣಕ್ಕೆ ಅಗತ್ಯವಿರುವ 5912 ಕೋಟಿ ರೂ.ಗೆ ಅಂದೇ ಸಂಪುಟದಲ್ಲಿ ಅನುಮತಿ ಪಡೆದಿದ್ದರು. ವಿಸ್ತೃತ ಯೋಜನಾ ವರದಿಯಂತೆ 67.14 ಟಿಎಂಸಿ ನೀರು ಸಂಗ್ರಹ ಹಾಗೂ 400 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಸೇರಿದೆ.

ಸಮಾನಾಂತರ ಅಣೆಕಟ್ಟು ಕೇವಲ ವಿದ್ಯುತ್ ಉತ್ಪಾದನೆ, ಕುಡಿ ಯುವ ನೀರು ಎಂದೇ ಉಲ್ಲೇಖಿಸ ಲಾಗಿದೆ. ಇದನ್ನೇ ಕೇಂದ್ರ ಜಲಸಂಪ ನ್ಮೂಲ ಇಲಾಖೆಗೆ ಸಲ್ಲಿಸಿ ಅನುಮತಿ ಕೋರಿತ್ತು. ಯೋಜನೆ ನಂತರ ಪರಿಷ್ಕ ರಣೆಗೊಂಡು 9 ಸಾವಿರ ಕೋಟಿ ರೂ.ಗೆ ಹೆಚ್ಚಳ ವಾಗಿತ್ತು. ಪ್ರಸ್ತುತ 14,500 ಕೋಟಿ ರೂ.ಗೆ ಮತ್ತೆ ಪರಿಷ್ಕರಣೆ ಗೊಂಡಿದೆ. ಮತ್ತಷ್ಟು ವಿಳಂಬಗೊಂಡರೆ ಯೋಜನಾ ವೆಚ್ಚ ಏರಲಿದೆ ಎಂಬ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ನಗರ-ಪಟ್ಟಣಗಳ ಕುಡಿಯುವ ನೀರು ಪೂರೈಕೆಗೆ ಒತ್ತು ನೀಡಿ ಯೋಜನೆಗೆ ಅನುಮತಿ ಪಡೆಯಲು ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹೇರಿದೆ. ಒಂದೆಡೆ ಒತ್ತಡ ಹೇರುತ್ತಾ ಕಾಮಗಾರಿ ಕೈಗೆತ್ತಿಕೊಳ್ಳಲು ಸರ್ಕಾರ ಚಾಲನೆ ನೀಡುತ್ತಿದೆ. ಸಮನಾಂತರ ಅಣೆಕಟ್ಟು ನಿರ್ಮಾಣಕ್ಕೆ ತಮಿಳುನಾಡು ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿ ನ್ಯಾಯಾಲಯದ ಮೆಟ್ಟಿಲು ಹತ್ತಿದೆ.

# ಏಕರೂಪ ನಾಗರಿಕ ಸಂಹಿತೆ ಕರಡು ಸಿದ್ಧ

(1ನೇ ಪುಟದಿಂದ) ಪಂಗಡಗಳಲ್ಲಿ ಹೆಣ್ಣುಮಕ್ಕಳ ಮದುವೆಯ ವಯಸ್ಸು 18ಕ್ಕಿಂತ ಕಡಿಮೆ. ಯುಸಿಸಿ ನಂತರ, ಎಲ್ಲಾ ಹುಡುಗಿಯರ ಮದುವೆಯ ವಯಸ್ಸನ್ನು ಹೆಚ್ಚಿಸಬಹುದಾಗಿದೆ.

ದೇಶದಲ್ಲಿ ಮದುವೆಯ ನೋಂದಣಿ ಕಡ್ಡಾಯವಲ್ಲ. ಎಲ್ಲಾ ಧರ್ಮಗಳಲ್ಲಿ ಮದುವೆಗಳ ನೋಂದಣಿ ಕಡ್ಡಾಯವಾಗಿರಬೇಕು ಎಂದು ಯುಸಿಸಿ ಸೂಚಿಸುತ್ತದೆ. ಇಲ್ಲದೇ ಹೋದರೆ ಸರ್ಕಾರದ ಸೌಲಭ್ಯ ಸಿಗುವುದಿಲ್ಲ. ಅನೇಕ ಧರ್ಮಗಳು ಮತ್ತು ಸಮುದಾಯಗಳ ವೈಯಕ್ತಿಕ ಕಾನೂನುಗಳು ಬಹುಪತ್ನಿತ್ವವನ್ನು ಗುರುತಿಸುತ್ತವೆ. ಮುಸ್ಲಿಂ ಸಮುದಾಯದಲ್ಲಿ ಮೂರು ವಿವಾಹಗಳಿಗೆ ಅವಕಾಶವಿದೆ. ಯುಸಿಸಿ ನಂತರ ಬಹುಪತ್ನಿತ್ವವನ್ನು ಸಂಪೂರ್ಣವಾಗಿ ನಿಷೇಧಿಸಬಹುದು.

ಲೀವ್ ಇನ್ ರಿಲೇಶನ್ ಶಿಪ್ ಘೋಷಣೆ ಮಾಡಿದ ನಂತರ ಪೋಷಕರಿಗೂ ಹೇಳಬೇಕಾಗುತ್ತದೆ. ಇದರೊಂದಿಗೆ ಸರ್ಕಾರಕ್ಕೆ ವಿವರ ನೀಡುವುದು ಅನಿವಾರ್ಯವಾಗಬಹುದು. ಮುಸ್ಲಿಂ ಸಮಾಜದಲ್ಲಿ ಹಲಾಲ್ ಮತ್ತು ಇದ್ದತ್ ಆಚರಣೆ ಇದೆ. ಯುಸಿಸಿ ಕಾನೂನುಗಳನ್ನು ಮಾಡಿ ಅನುಷ್ಠಾನಗೊಳಿಸಿದರೆ ಅದು ಕೊನೆಗೊಳ್ಳುತ್ತದೆ.

ವಿಚ್ಛೇದನದ ಕಾರಣಗಳು ಹೆಂಡತಿ ಮತ್ತು ಪತಿಗೆ ವಿಭಿನ್ನವಾಗಿವೆ. ಯುಸಿಸಿ ನಂತರ ವಿಚ್ಛೇದನಕ್ಕೆ ಇದೇ ರೀತಿಯ ಆಧಾರಗಳು ಅನ್ವಯಿಸಬಹುದು.

ಗಂಡನ ಮರಣದ ನಂತರ ಪರಿಹಾರದ ಮೊತ್ತ ಸಿಕ್ಕ ನಂತರ ಪತ್ನಿ ಮರುಮದುವೆಯಾಗಿದ್ದು, ಮೃತನ ಪೋಷಕರು ನಿರ್ಗತಿಕರಾಗಿದ್ದಾರೆ. ವಿಧವೆ ಪತ್ನಿಗೆ ಪರಿಹಾರವನ್ನು ನೀಡಿದರೆ, ಹಳೆಯ ಅತ್ತೆಯನ್ನು ನಿರ್ವಹಿಸುವ ಜವಾಬ್ದಾರಿಯೂ ಅವಳ ಮೇಲಿರುತ್ತದೆ ಎಂದು ಯುಸಿಸಿ ಸೂಚಿಸುತ್ತದೆ. ಮರುಮದುವೆಯಾದರೆ ಮೃತಳ ಪೋಷಕರಿಗೆ ಪರಿಹಾರ ನೀಡಲಾಗುವುದು. ಯುಸಿಸಿ ಜಾರಿಯಿಂದ ಮುಸ್ಲಿಂ ಮಹಿಳೆಯರೂ ಮಗುವನ್ನು ದತ್ತು ಪಡೆಯುವ ಹಕ್ಕು ಪಡೆಯಲಿದ್ದಾರೆ. ಅನಾಥ ಮಕ್ಕಳ ರಕ್ಷಕತ್ವದ ಪ್ರಕ್ರಿಯೆಯನ್ನು ಸರಳೀಕರಿಸಬೇಕು ಮತ್ತು ಬಲಪಡಿಸಬೇಕು ಎಂದು ಯುಸಿಸಿ ಸೂಚಿಸುತ್ತದೆ.

ಅನೇಕ ಧರ್ಮಗಳಲ್ಲಿ, ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಸಮಾನ ಹಕ್ಕುಗಳಿಲ್ಲ. ಯುಸಿಸಿ ಎಲ್ಲರಿಗೂ ಸಮಾನ ಹಕ್ಕುಗಳನ್ನು ಸೂಚಿಸುತ್ತದೆ. ಜನಸಂಖ್ಯಾ ನಿಯಂತ್ರಣವನ್ನು ಸೂಚಿಸಲಾಗಿದೆ. ಇದರಲ್ಲಿ ಮಕ್ಕಳ ಸಂಖ್ಯೆಯನ್ನು ಮಿತಿಗೊಳಿಸಿ, ನಿಯಮ ಉಲ್ಲಂಘಿಸಿ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗುವಂತೆ ಸೂಚಿಸಲಾಗಿದೆ.

# ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಕಾನೂನು ಜಾರಿಗೊಳಿಸಿ

### ಜಗಳೂರು : ಹುಚ್ಚವ್ವನಹಳ್ಳಿ ಮಂಜುನಾಥ್ ಆಗ್ರಹ

ಜಗಳೂರು, ಜೂ. 30 - ರಾಜ್ಯ ಸರ್ಕಾರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಕಾನೂನು ಜಾರಿ ಮಾಡಿ ರಾಜ್ಯದ ರೈತರ ರಕ್ಷಣೆಗೆ ಧಾವಿಸಬೇಕೆಂದು ರಾಜ್ಯ ರೈತ ಸಂಘ, ಹಸಿರು ಸೇನೆ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಒತ್ತಾಯಿಸಿದರು.



ಜಗಳೂರು ತಾಲ್ಲೂಕಿನ ಚಿಕ್ಕಬನ್ನಿಹಟ್ಟಿಯಲ್ಲಿಂದು ರಾಜ್ಯ ರೈತ ಸಂಘ, ಹಸಿರುಸೇನೆ ಗ್ರಾಮ ಘಟಕ ನಾಮಫಲಕ ಅನಾವರಣ ಮತ್ತು ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಈ ಹಿಂದೆ ಕೃಷಿ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿಪಡಿಸುವ ಪ್ರತ್ಯೇಕ ಕಾಯಿದೆ ಜಾರಿ ಮಾಡುವಂತೆ ಸಂಘದಿಂದ ವರ್ಷಗಟ್ಟಲೇ ಹೋರಾಟ ಮಾಡಿದರೂ ಕೇಂದ್ರ ಸರ್ಕಾರ ಕಿವಿಗೊಡಲಿಲ್ಲ. ಅಂದು ಕೇಂದ್ರದ ವಿರುದ್ಧ ರೈತರ ಹೋರಾಟಕ್ಕೆ ಸಿದ್ದರಾಮಯ್ಯ ಸೇರಿದಂತೆ ಅನೇಕ ಕಾಂಗ್ರೆಸ್ ನಾಯಕರು ಈ ಹೋರಾಟ ಬೆಂಬಲಿಸಿದ್ದರು. ಇದೀಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಮಟ್ಟಕ್ಕಾದರೂ ಕನಿಷ್ಟ ಬೆಂಬಲ ಬೆಲೆ ಕಾನೂನು ಜಾರಿ ಮಾಡುವ ಮೂಲಕ ರೈತರ ರಕ್ಷಣೆಗೆ ಬರಬೇಕೆಂದು ಒತ್ತಾಯಿಸಿದರು.

ಜಗಳೂರು ತಾಲ್ಲೂಕಿನಲ್ಲಿ ಬೆಸ್ಕಾಂ ಅಧಿಕಾರಿಗಳು ರೈತರ ಪಂಪ್‌ಸೆಟ್‌ಗಳ ವಿದ್ಯುತ್ ಪರಿವರ್ತಕಗಳು ಸುಟ್ಟಾಗ ಲಂಚ ಕೊಟ್ಟರೆ ಮಾತ್ರ ಅವುಗಳನ್ನು ಬದಲಾಯಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಬೆಳೆಗಳು ಹಾಳಾಗುತ್ತಿವೆ. ಬೆಸ್ಕಾಂ ಅಧಿಕಾರಿಗಳು ಇನ್ನು ಮುಂದೆ ಟಿಸಿ ಸುಟ್ಟ ತಕ್ಷಣ ಹೊಸ ಟಿಸಿ ಕೊಡಬೇಕು ಎಂದು ಆಗ್ರಹಿಸಿದರು.

ಕೊಂಡು ಕುರಿ ಅಭಯಾರಣ್ಯ ಅಕ್ಕಪಕ್ಕದಲ್ಲಿ ವ್ಯವಸಾಯ ಮಾಡುವ ರೈತರಿಗೆ ರಾತ್ರಿ ವೇಳೆಯಲ್ಲಿ ವಿದ್ಯುತ್ ನೀಡುವುದರಿಂದ ಚಿರತೆ, ಕರಡಿ ಇತರೆ ಕಾಡು ಪ್ರಾಣಿಗಳ ದಾಳಿಗೆ ಹೆದರಿ ವ್ಯವಸಾಯವನ್ನೇ ಬಿಡುವ ಸ್ಥಿತಿ ಇದೆ. ಈ ಸುತ್ತ ಮುತ್ತಲ ಗ್ರಾಮಗಳ ರೈತರಿಗೆ ಹಗಲು ವೇಳೆಯಲ್ಲಿಯೇ ಕನಿಷ್ಟ 5 ಗಂಟೆಗಳ ಕಾಲ ಗುಣಮಟ್ಟದ ವಿದ್ಯುತ್ ನೀಡಬೇಕೆಂದು ಮಂಜುನಾಥ್ ಒತ್ತಾಯಿಸಿದರು.

ಜಿಲ್ಲಾ ಮುಖಂಡ ಕಾನನಕಟ್ಟೆ ತಿಪ್ಪೇಸ್ವಾಮಿ ಮಾತನಾಡಿ, ಈಗಾಗಲೇ ಮುಂಗಾರು ಮಳೆ ವಿಳಂಬದಿಂದ ರೈತರು ಆತಂಕದಲ್ಲಿದ್ದಾರೆ. ಜಿಲ್ಲಾಡಳಿತ ಕೂಡಲೇ ಜನರು ಗುಳೇ ಹೋಗು ವುದನ್ನು ತಡೆದು ಅವರಿಗೆ ಉದ್ಯೋಗ ಒದಗಿ ಸುವ ಕೆಲಸ ಮಾಡಬೇಕು, ಒತ್ತಾಯಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕಬನ್ನಿಹಟ್ಟಿ ವೀರೇಶ್ ವಹಿಸಿದ್ದರು.

ಈ ಜಿಲ್ಲಾ ಪ್ರಧಾನಕಾರ್ಯದರ್ಶಿ ಚಿರಂಜೀವಿ, ದಿಬ್ಬದಹಳ್ಳಿ ಗಂಗಾಧರಪ್ಪ ಉಪಸ್ಥಿತರಿದ್ದರು. ಗ್ರಾ.ಪಂ. ಸದಸ್ಯರಾದ ಮಹೇಶ, ಪರಮೇಶ್, ಚಂದ್ರಶೇಖರ್ ಉಪಸ್ಥಿತರಿದ್ದರು. ಸುತ್ತ ಮುತ್ತ ಗ್ರಾಮಗಳ ನೂರಾರು ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.


### ಸಾರ್ವಜನಿಕ ಪ್ರಕಟಣೆ

ಬಿ.ಆರ್. ದೇವರಾಜ್ ಬಿನ್ ಎ.ಆರ್. ರಾಮಚಂದ್ರಪ್ಪ, ವಾಸ : #5460/7, 7ನೇ ಅಡ್ಡರಸ್ತೆ, ಸಿದ್ಧವೀರಪ್ಪ ಬಡಾವಣೆ, ದಾವಣಗೆರೆ, ಮೊ. : 9844442008 ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ : ಮೇಲ್ಕಂಡ ನನ್ನ ಕಕ್ಷಿದಾರರು ದಾವಣಗೆರೆ ಸಿಟಿ, 33ನೇ ವಾರ್ಡಿನ ಸೈಟ್ ನಂ. 14, # 3998/14, ವಿಸ್ತೀರ್ಣ 40x37 ಖಾಲಿ ನಿವೇಶನವನ್ನು ದಿ. : 30.10.2015 ರಂದು ಮಾಗಾನಹಳ್ಳಿ ಸೋಮಶೇಖರಪ್ಪ ಬಿನ್ ಲೇ. ಮಾಗಾನಹಳ್ಳಿ ಕೊಟ್ರಪ್ಪ ಇವರಿಂದ ಖರೀದಿ ಮಾಡಿರುತ್ತೇವೆ. ಸದರಿ ಸೊತ್ತಿಗೆ ಸಂಬಂಧ ಪಟ್ಟಂತೆ ಮೂಲ ಕ್ರಯಪತ್ರಗಳಾದ ಎಸ್. ಆರ್. ನಂ. 4861/1974-75 ಮತ್ತು ಎಸ್. ಆರ್.ನಂ. 215/1980-81 ಅಸಲು ಕ್ರಯ ಪತ್ರಗಳು ದಿ. : 15.06.2023 ರಂದು ವಿದ್ಯಾನಗರದಲ್ಲಿ ಜೆರಾಕ್ಸ್ ಮಾಡಿಸಲು ತೆಗೆದುಕೊಂಡು ಹೋದಾಗ ಆಕಸ್ಮಿಕವಾಗಿ ಕಳೆದು ಹೋಗಿರುತ್ತವೆ. ನನ್ನ ಕಕ್ಷಿದಾರರು ಎಷ್ಟು ಹುಡುಕಿದರೂ ಸಹ ಸದರಿ ಅಸಲು ದಾಖಲೆಗಳು ಸಿಕ್ಕಿರುವುದಿಲ್ಲ. ಆ ಕಾರಣ ಸದರಿ ಮೇಲ್ಕಂಡ ಅಸಲು ಪತ್ರಗಳು ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನಮ್ಮ ಕಕ್ಷಿದಾರರನ್ನು ಸಂಪರ್ಕಿಸಿ ಸದರಿ ದಾಖಲೆಯನ್ನು ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ.

ಸಹಿ/- (ಆರ್.ಟಿ. ವಿನಯ್ ಕುಮಾರ್), ವಕೀಲರು



Sri Kannika Parameshwari Diamond Jublie Vidyapeeta (R)

**AGB First Grade College**

2nd Main, 2nd Cross, P.J Extension, Davanagere-2

**WANTED**

**FOR BCA Division**

**Asst. Professor**

Qualification : MCA / M.Tech

3 years of Experience prefered.

**Office Clerk**

Qualification :

PUC with Computer Knowleldge.

**School Bus Driver**

Contcat :

97403 51816, 97433 22633

# ಜೀವಗಳನ್ನು ಉಳಿಸಲು ದಣಿವರಿವಿಲ್ಲದೆ ದುಡಿಯುವ ವೈದ್ಯರಿಗಾಗಿ 'ವೈದ್ಯರ ದಿನ'






**ವೈದ್ಯರನ್ನು ದೇವರು ಎಂದು ಭಾವಿಸುವ ನಾಡು ನಮ್ಮದು. ವೈದ್ಯರ ಕಠಿಣ ಪರಿಶ್ರಮ ಮತ್ತು ದೃಢಸಂಕಲ್ಪವನ್ನು ಮೆಚ್ಚಿ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಪ್ರತಿ ವರ್ಷ ಜುಲೈ 1 ರಂದು ವೈದ್ಯರ ದಿನವನ್ನು ಆಚರಿಸುತ್ತದೆ. ಲಕ್ಷಾಂತರ ಜೀವಗಳನ್ನು ಉಳಿಸಲು ದಣಿವರಿವಿಲ್ಲದೆ ದುಡಿಯುವ ವೈದ್ಯಕೀಯ ಸಿಬ್ಬಂದಿಯ ಶ್ರಮವನ್ನು ಗುರುತಿಸಲು ಭಾರತವು ಈ ದಿನವನ್ನು ಆಚರಿಸುತ್ತದೆ.**

ಭಾರತ ದೇಶದಾದ್ಯಂತ ಪ್ರತೀ ವರ್ಷ ಜುಲೈ 1ರಂದು ರಾಷ್ಟ್ರೀಯ 'ವೈದ್ಯರ ದಿನ'ವನ್ನು ಆಚರಿಸಲಾಗುತ್ತಿದೆ. ವೈದ್ಯಕೀಯ ಹಾಗೂ ಸಾಮಾಜಿಕ ಕ್ಷೇತ್ರಕ್ಕೆ ಭಾರತ ರತ್ನ ಪುರಸ್ಕೃತರಾದ ಡಾ॥ ಬಿ.ಸಿ.ರಾಯ್ ಅವರ ಕೊಡುಗೆ ಅಪಾರ. ಇವರು ಮಹಾತ್ಮ ಗಾಂಧೀಜಿಯವರ ವೈದ್ಯರಾಗಿದ್ದರು, ಡಾ॥ ರಾಯ್ ಅವರು 1928ರಲ್ಲಿ 'ಭಾರತೀಯ ವೈದ್ಯಕೀಯ ಸಂಘ' ಹಾಗೂ 1933ರಲ್ಲಿ 'ಭಾರತೀಯ ವೈದ್ಯಕೀಯ ಮಂಡಳಿ' ನಂತಹ ಅನೇಕ ಸಂಸ್ಥೆಗಳನ್ನು ಹುಟ್ಟುಹಾಕಿ ದೂರದೃಷ್ಟಿಯ ಮಾರ್ಗದರ್ಶನಕ್ಕೆ ಬುನಾದಿ ಹಾಕಿದ್ದಾರೆ.

**ಸಮಾಜದಲ್ಲಿ ವೈದ್ಯರ ಪಾತ್ರ :** 'ಎಲ್ಲಿ ವಿದ್ವಾಂಸರು, ವೈದ್ಯರು, ರಾಜರು ಹಾಗೂ ನೀರು ಇರುವುದಿಲ್ಲವೋ, ಅಲ್ಲಿ ಇರುವುದು ಉಚಿತವಲ್ಲ' ಎಂದು ಸಂಸ್ಕೃತದಲ್ಲಿ ಒಂದು ಉಕ್ತಿ ಇದೆ. ಪ್ರತೀ ಸಮಾಜದಲ್ಲಿ ಎಲ್ಲಾ ವರ್ಗದ ಕೆಲಸಗಾರರೂ ಅದರ ಸರ್ವಾಂಗೀಣ ಅಭಿವೃದ್ಧಿಗೆ ಅತ್ಯವಶ್ಯ. ಅದರಲ್ಲೂ ಸಾಮಾಜಿಕ ಆರೋಗ್ಯವನ್ನು ಕಾಪಾಡಿಕೊಂಡು ಹೋಗುವುದು ವೈದ್ಯರ ಕರ್ತವ್ಯ. ತಮ್ಮ ವೈಯಕ್ತಿಕ ಜೀವನವನ್ನು ಬದಿಗಿಟ್ಟು, ಹಗಲು-ರಾತ್ರಿಯೆನ್ನದೇ ಸೇವೆ ಸಲ್ಲಿಸುವ ವೈದ್ಯರಿಗೆ ಸಮಾಜ ಯಾವಾಗಲೂ ಋಣಿ. ರೋಗಿಗಳಿಗೆ ಚಿಕಿತ್ಸೆ, ಮಾರ್ಗದರ್ಶನ ಹಾಗೂ ಸುರಕ್ಷತೆಯ ಭಾವನೆಯನ್ನು ನೀಡುವ ವೈದ್ಯರ ನಿಸ್ವಾರ್ಥ ಸೇವೆಯನ್ನು ಜ್ಞಾಪಿಸಿಕೊಳ್ಳುವ ಹಾಗೂ ಧನ್ಯವಾದ ಅರ್ಪಿಸುವ ಅವಕಾಶದ ಒಂದು ಸಾಂಕೇತಿಕ ದಿನ ಈ 'ವೈದ್ಯರ ದಿನ'.

**ವೈದ್ಯ-ರೋಗಿ ಬಾಂಧವ್ಯ ಪೂರ್ವಾಪರ :** ರೋಗಿ-ವೈದ್ಯ ಸಂಬಂಧವೆಂದರೆ ಅದೊಂದು ಪವಿತ್ರ ಸಂಬಂಧ. ಯಾವುದೇ ರೋಗಿಯ ತನ್ನೆಲ್ಲಾ ಸಂಕಟ, ತೊಂದರೆಗಳನ್ನು ಮನೆಯವರಿಗಿಂತಲೂ ಹೆಚ್ಚಾಗಿ ವೈದ್ಯರ ಹತ್ತಿರ ಹೇಳಿಕೊಳ್ಳುತ್ತಾರೆ. ರೋಗಿಯ ಪರೀಕ್ಷೆ ಇಂದು ಉನ್ನತ ಸ್ತರದ ಮಾನಸಿಕ ಪ್ರಕ್ರಿಯೆ, ಯಾವ ಸಂಕೋಚವಿಲ್ಲದೆ ತನ್ನನ್ನು ಪರೀಕ್ಷೆಗೆ ಒಡ್ಡಿಕೊಳ್ಳುವ ರೋಗಿಗೆ ವೈದ್ಯರ ಮೇಲಿನ ನಂಬಿಕೆ ತುಂಬಾ ಗಟ್ಟಿಯಾಗಿರಬೇಕು. ರೋಗಿಯ ಅಥವಾ ರೋಗದ ಬಗ್ಗೆ ಗೌಪ್ಯತೆಯನ್ನು ಕಾಯ್ದಿರಿಸುವುದು ವೈದ್ಯರ ಆದ್ಯ ಕರ್ತವ್ಯ. ಆದರೆ ಇತ್ತೀಚೆಗೆ ಈ ಸಂಬಂಧದಲ್ಲಿ ಬಿರುಕು ಕಾಣಿಸಿಕೊಂಡು ಅದು ಹೆಚ್ಚಾಗುತ್ತಲೇ ಇದೆ. ಇದಕ್ಕೆ ಎರಡೂ ಕಡೆಯಿಂದಲೂ ವೈಫಲ್ಯಗಳು ಕಂಡುಬರುತ್ತವೆ.

ಇತ್ತೀಚಿನ ದಿನಗಳಲ್ಲಿ ವೈದ್ಯರ ಹಾಗೂ ಇತರೆ ಸಿಬ್ಬಂದಿಯ ಮೇಲೆ ಆಗುವ ಹಲ್ಲೆಗಳ ಬಗ್ಗೆ ಪದೇ ಪದೇ ವರದಿಗಳು ಬರುತ್ತಲೇ ಇರುತ್ತವೆ. ಎಷ್ಟೋ ಬಾರಿ ಅವು ವರದಿಯಾಗುವುದೇ ಇಲ್ಲ. 2015 ರ ಅಮೇರಿಕದ ಒಂದು ಸರ್ವೆಯ ಪ್ರಕಾರ ವೈದ್ಯರ ಮೇಲಿನ ಹಲ್ಲೆಗಳು ಬೇರೆ ವೃತ್ತಿಗಳಿಗಿಂತ ಸುಮಾರು ನಾಲ್ಕು ಪಟ್ಟು ಹೆಚ್ಚು, ಭಾರತದಲ್ಲಿ ಈ ಪ್ರಮಾಣದ ವೈಜ್ಞಾನಿಕ ಸರ್ವೆಗಳು ಇಲ್ಲದಿದ್ದರೂ ಇದು ಗಣನೀಯವಾಗಿ ಹೆಚ್ಚಿದೆ ಎಂಬುದು ಸರ್ವವಿದಿತ. ಇದನ್ನು ನಾವು ಎರಡು ದೃಷ್ಟಿಕೋನಗಳಿಂದ ನೋಡಬಹುದು.

**1. ರೋಗಿಗಳ / ಸಮಾಜದ ದೃಷ್ಟಿ ಕೋನ :** ಸಾಮಾನ್ಯ ಜನರ ದೃಷ್ಟಿಯಲ್ಲಿ 'ವೈದ್ಯೋ ನಾರಾಯಣೋ ಹರಿಃ' ಎಂಬ ಗೌರವ ಭಾವ ಕಡಿಮೆಯಾಗಿ ವೈದ್ಯರು ಹಾಗೂ ಆಸ್ಪತ್ರೆಗಳು ಕೇವಲ ದುಡ್ಡು ಮಾಡುವ ಪಿಪಾಸುಗಳಂತೆ ಕಾಣತೊಡಗಿದ್ದಾರೆ. ಅವಶ್ಯಕತೆ ಇಲ್ಲದೇ ಅನೇಕ ಪರೀಕ್ಷೆಗಳಿಗೆ ಒಳಪಡಿಸುತ್ತಾರೆಂಬುದು ಜನರ ಅಭಿಪ್ರಾಯ.

**2. ವೈದ್ಯರ/ಆಸ್ಪತ್ರೆಗಳ ದೃಷ್ಟಿಕೋನ :** ವೈದ್ಯರು ಆಯಾ ರಂಗಗಳಲ್ಲಿ ವಿಶೇಷ ಪರಿಣಿತಿಯನ್ನು ಪಡೆದಿದ್ದರೂ ಅವರೂ ಕೂಡ ಸಾಮಾನ್ಯ ಮನುಷ್ಯರೇ. ಎಲ್ಲಾ ಪ್ರಯತ್ನಗಳ ನಂತರವೂ ವೈದ್ಯರ ಕೈಮೀರಿ ತೊಂದರೆಗಳಾಗಬಹುದು. ರೋಗಿ ಸಾವಿಗೀಡಾಗಬಹುದು. ಸಾವನ್ನು ಇನ್ನೂ ಗೆಲ್ಲಲಾಗಿಲ್ಲವಾದ್ದರಿಂದ ಹಾಗೂ ಎಷ್ಟೋ ರೋಗಗಳಿಗೆ ಪರಿಣಾಮಕಾರಿಯಾದ ಚಿಕಿತ್ಸೆಗಳು ಇಲ್ಲದಿರುವುದರಿಂದ ಮತ್ತು ಪ್ರತಿಯೊಬ್ಬ ರೋಗಿಯೂ ಒಂದೊಂದು ರೀತಿ ಚಿಕಿತ್ಸೆಗಳಿಗೆ ಸ್ಪಂದಿಸುವುದರಿಂದ ಪ್ರತಿ ಬಾರಿ ರೋಗವನ್ನು ಗುಣಪಡಿಸುವುದು ಹಾಗೂ ಸಾವನ್ನು ತಪ್ಪಿಸುವುದು ಅಸಾಧ್ಯ.

ಅನೇಕ ಬಾರಿ ವೈದ್ಯರು ಹಲ್ಲೆಗೊಳಗಾದ ನಂತರ ಮಾನಸಿಕ ಹಿಂಸೆ, ಒತ್ತಡಗಳನ್ನು ಅನುಭವಿಸಿ ಆತ್ಮಹತ್ಯೆಯಂತಹ ಕೊನೆಯ ಪ್ರಯತ್ನಕ್ಕೂ ಮುಂದಾಗುತ್ತಾರೆ. ಇದೇ ರೀತಿ ಮುಂದುವರೆದರೆ ವೈದ್ಯರು ಯಾವುದೇ ಚಿಕಿತ್ಸೆಗೆ ಮುಂದಾಗದೇ ಇರಬಹುದು. ಇದರಿಂದ ಜನರಿಗೆ ಹಾಗೂ ಸಮಾಜಕ್ಕೆ ತೊಂದರೆ. ಬಹುಶಃ ವೈದ್ಯರ ಮೇಲಿನ ಗೌರವ ಸ್ವಲ್ಪ ಪ್ರಮಾಣದಲ್ಲಿಯಾದರೂ ಹೆಚ್ಚಾಗಲಿಕ್ಕೆ ಕೋವಿಡ್-19 ಮಹಾಮಾರಿಯೂ ಒಂದು ಕಾರಣ. ಆ ದಿನಗಳಲ್ಲಿ ಅನುಭವಿಸಿದ ಸಂಕಟಗಳು, ಮನೆ ಮಕ್ಕಳಿಂದ ದೂರವಿದ್ದು, ಹಗಲಿರುಳು ಶ್ರಮಿಸಿದ ವೈದ್ಯರು ಹಾಗೂ ಇತರೆ ಸಿಬ್ಬಂದಿಯವರ ಸೇವೆಯನ್ನು ಎಷ್ಟು ಕೊಂಡಾಡಿದರೂ ಸಾಲದು.

**ಸಮಾಜದ/ಸರ್ಕಾರದ ಜವಾಬ್ದಾರಿಗಳು :** ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜನರ ಸೌಲಭ್ಯಕ್ಕಾಗಿ ಅನೇಕ ಸ್ಕೀಮ್‌ಗಳನ್ನು ಜಾರಿಗೆ ತಂದಿವೆ. ಆರೋಗ್ಯ ಕರ್ನಾಟಕ, ಆಯುಷ್ಮಾನ್ ಭಾರತದಂತಹ ಸೇವೆಗಳಿಂದ ಹೃದಯ ರೋಗಗಳು, ಕ್ಯಾನ್ಸರ್‌ನಂತಹ ಅನೇಕ ರೋಗಗಳಿಗೆ ಉಚಿತ ಚಿಕಿತ್ಸೆಗಳು ಲಭ್ಯವಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಸೇವೆಗಳು, ಔಷಧಿಗಳು ದೊರೆಯುತ್ತವೆ. ಪ್ರತಿಯೊಬ್ಬ ಪ್ರಜೆಯೂ ಇವುಗಳ ಸದುಪಯೋಗ ಪಡೆದುಕೊಂಡು ಉತ್ತಮ ಸಮಾಜದ ನಿರ್ಮಾಣಕ್ಕೆ ಮುಂದಾಗಬೇಕು.

ಅದೇ ರೀತಿ ಸರ್ಕಾರ ಆಸ್ಪತ್ರೆಗಳ ಮೇಲೆ ಕನಿಷ್ಟ ಗುಣಮಟ್ಟದ ನಿಯಮಗಳ ಕಡ್ಡಾಯದ ಜೊತೆಗೆ ಆಸ್ಪತ್ರೆಗಳ ತುರ್ತು ಚಿಕಿತ್ಸಾ ವಿಭಾಗಗಳಲ್ಲಿ ಸುರಕ್ಷತೆಯ ಕ್ರಮಗಳನ್ನು ತೆಗೆದುಕೊಳ್ಳಲು ಆಯೋಜಿಸಬೇಕು. ವೈದ್ಯರ ಮೇಲೆ ಹಲ್ಲೆಯಾದರೆ ಕಠಿಣ ಶಿಕ್ಷೆಯಾಗುವ ಕಾಯಿದೆಗಳನ್ನು ಜಾರಿ ಮಾಡಬೇಕು.

**ರೋಗಮುಕ್ತ ಸಮಾಜ - ಉಜ್ವಲ ಭವಿಷ್ಯದೆಡೆಗೆ...** ಔಷಧಿಗಳು 'ರೋಗ'ಗಳನ್ನು ವಾಸಿ ಮಾಡಬಹುದು, ಆದರೆ 'ರೋಗಿ'ಗಳನ್ನು ವಾಸಿ ಮಾಡಲು ವೈದ್ಯರೇ ಬೇಕು. ಪ್ರತಿಯೊಬ್ಬ ವ್ಯಕ್ತಿಯೂ ಈಗಿನ ಅಂತರ್ಜಾಲ ದಿನಗಳಲ್ಲಿ ಅರ್ಧಂಬರ್ಧ ವಿಷಯಗಳನ್ನು ತಿಳಿದುಕೊಂಡು ಸ್ವಂತ ಚಿಕಿತ್ಸೆಗಳನ್ನು ತೆಗೆದುಕೊಳ್ಳದೇ, ತಮ್ಮ ಸಮಸ್ಯೆಗಳಿಗೆ ವೈಜ್ಞಾನಿಕವಾಗಿ ಸೂಕ್ತ ಪರಿಹಾರಗಳನ್ನು ಕೈಗೊಂಡರೆ ಎಷ್ಟೋ ರೋಗಗಳನ್ನು ಮೂಲದಲ್ಲಿಯೇ ಗುಣಪಡಿಸಬಹುದು.

ಎಲ್ಲಕ್ಕಿಂತ ಹೆಚ್ಚಾಗಿ 'Prevention is better than cure' ಎಂದು ಎಲ್ಲರಿಗೂ ತಿಳಿದಿರುವಂತೆ ನಿಯಮಿತ ಆಹಾರ ಸೇವನೆ, ಯೋಗ, ವ್ಯಾಯಾಮ, ಧೂಮಪಾನ, ಮದ್ಯಪಾನಗಳಿಂದ ದೂರವಿರುವಿಕೆ, ಆಗಾಗ್ಗೆ ರಕ್ತದೊತ್ತಡ ಹಾಗೂ ಮಧುಮೇಹ ರೋಗಗಳ ತಪಾಸಣೆ, ನಿಯಂತ್ರಣ ಮತ್ತು ಒತ್ತಡದ ಜೀವನ ಶೈಲಿಯನ್ನು ಬಿಟ್ಟು ನೆಮ್ಮದಿಯ ಬದುಕಿನ ದಾರಿಯಲ್ಲಿ ಸಾಗಿದರೆ ಹಿರಿಯರು ಹೇಳಿದಂತೆ ಬಾಳು ಬಂಗಾರವಾಗುವುದು. ಹೊಸ ಆವಿಷ್ಕಾರಗಳಿಂದಲೇ ರೋಗಗಳನ್ನು ಗುಣಪಡಿಸಲು ಸಾಧ್ಯವಿಲ್ಲ. ಅದಕ್ಕೆ ವೈದ್ಯರ ನಿಜವಾದ ಮಾತೃಸದೃಶ 'Healing Touch' ಅತ್ಯವಶ್ಯ. ರೋಗಿಯ ಎಲ್ಲಾ ಆಯಾಮಗಳನ್ನು ಅರಿತುಕೊಂಡು, ನಿಸ್ವಾರ್ಥತೆಯಿಂದ ಅವರನ್ನು ಗುಣಪಡಿಸುವ ಅಥವಾ ಗುಣಪಡಿಸಲು ಸಾಧ್ಯವಿಲ್ಲದಂತಹ ಕಾಯಿಲೆಗಳಿದ್ದರೆ ಅವುಗಳ ತೀವ್ರತೆಯನ್ನು ಕಡಿಮೆ ಮಾಡಿ ಜೀವನವನ್ನು ಹಸನು ಮಾಡುವ ಮಹತ್ತರ ಕಾರ್ಯ ವೈದ್ಯರ ಮೇಲಿದೆ.

ರೋಗ ಮುಕ್ತ ಸಮಾಜ ಎಲ್ಲ ವೈದ್ಯರ ಧ್ಯೇಯವಾಗಬೇಕು. ಅದಕ್ಕಾಗಿ ಎಲ್ಲಾ ವಿಭಾಗಗಳ ವೈದ್ಯರು (ಅಲೋಪಥಿ, ಆಯುರ್ವೇದ, ಹೋಮಿಯೋಪಥಿ ಇತ್ಯಾದಿ) ಕೈಗೂಡಿಸಿ ಆ ಗುರಿಯೆಡೆಗೆ ಕಾಯಾ, ವಾಚಾ, ಮನಸಾ ಶ್ರಮಿಸಬೇಕು. ವೈದ್ಯರ ಪ್ರತಿಯೊಂದು ನಡಿಗೆ ಸದ್ಭಾವನೆಯಿಂದ ಕೂಡಿದ್ದರೆ ಮಾತ್ರ ಸಮಾಜಕ್ಕೆ ಮತ್ತೆ ವೈದ್ಯ ವೃತ್ತಿಯ ಮೇಲೆ ಗಾಢವಾದ ನಂಬಿಕೆ, ಗೌರವ ಬರುವುದಕ್ಕೆ ಸಾಧ್ಯ.



ಡಾ॥ ಶ್ರೀನಿವಾಸ. ಬಿ.
MD., DM., FSCAI (USA), FACC (USA)
ಹೃದಯರೋಗ ತಜ್ಞರು,
ಎಸ್.ಎಸ್. ನಾರಾಯಣ ಹಾರ್ಟ್ ಸೆಂಟರ್,
ದಾವಣಗೆರೆ.

## ಹೆಂಡತಿ ಹತ್ಯೆ : ಗಂಡನಿಗೆ ಜೀವಾವಧಿ ಶಿಕ್ಷೆ

ದಾವಣಗೆರೆ, ಜೂ.30- ಹೆಂಡತಿ ಕುತ್ತಿಗೆ ಕೊಯ್ದು ಹತ್ಯೆ ಮಾಡಿದ ಗಂಡನಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ 11 ಸಾವಿರ ರೂ. ದಂಡ ವಿಧಿಸಿದೆ. 19/02/2020 ರಂದು ಅಮರಾವತಿ ಗ್ರಾಮದ ಮಲ್ಲಿಕಾರ್ಜುನ ಬಡಾವಣೆಯ ಆರೋಪಿ 54 ವರ್ಷದ ಮರಿಯಪ್ಪ ಎಂಬಾತ ಕುಡಿದು ಬಂದು ಮನೆಯಲ್ಲಿ ಹೆಂಡತಿ ಸೌಭಾಗ್ಯಮ್ಮ ಜೊತೆ ಕುಡಿಯುವುದಕ್ಕೆ ಹಣ ಕೊಡಲಿಲ್ಲ ಎಂದು ಜಗಳ ಮಾಡಿದ್ದು, ನಂತರ ಲೈಂಗಿಕ ಕ್ರಿಯೆಗೆ ಸಹಕಾರ ಮಾಡದೇ ಇದ್ದುದರಿಂದ, ಇದೇ ವಿಚಾರಕ್ಕೆ ಬೇಜಾರು ಮಾಡಿಕೊಂಡು, ಅದೇ ದಿನ ಮನೆಯಲ್ಲಿ ಚಾಕುವಿನಿಂದ ಕುತ್ತಿಗೆ ಕೊಯ್ದು ಕೊಲೆ ಮಾಡಿದ್ದಾನೆ.

ಈ ಸಂಬಂಧ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿತ್ತು. ಸದರಿ ಕೊಲೆ ಪ್ರಕರಣವನ್ನು ಹರಿಹರ ಸಿಪಿಐ ಸತೀಶಕುಮಾರ್ ತನಿಖೆ ನಡೆಸಿ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. 6-06-2023 ರಂದು ದಾವಣಗೆರೆ ಒಂದನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಜೆ.ವಿ.ವಿಜಯಾನಂದ ಅವರು ಆರೋಪಿಗೆ ಈ ಶಿಕ್ಷೆ ವಿಧಿಸಿದ್ದಾರೆ. ಸರ್ಕಾರಿ ಅಭಿಯೋಜಕ ಸತೀಶ್ ವಾದ ಮಂಡಿಸಿದ್ದರು.

## 'ತುಮಾರೆ ಸಿವಾ ಔರ್ ಕೋಯಿ ನಹಿ' ಹಿಂದಿ ವಚನ ನೃತ್ಯರೂಪಕ

ಸಾಣೇಹಳ್ಳಿ, ಜೂ. 30- ಕನ್ನಡ ನಾಡಿನಲ್ಲಿ ಸೂರ್ಯನೋಪಾದಿಯಲ್ಲಿ ಉದಯಿಸಿದವರು ಬಸವಣ್ಣ. ಅವರು ತಮ್ಮ ಸಾಧನೆಯ ಮೂಲಕ ಭಕ್ತಿ ಭಂಡಾರಿ, ಜಗದಣ್ಣ, ವಿಶ್ವಗುರು ಎಂದು ಪ್ರಖ್ಯಾತರಾದರು ಎಂದು ಶ್ರೀ ಶಿವಕುಮಾರ ಕಲಾಸಂಘದ ಅಧ್ಯಕ್ಷರಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬಣ್ಣಿಸಿದ್ದಾರೆ.

ಬಸವಣ್ಣನವರ 38 ವಚನಗಳನ್ನು ಹಿಂದಿ ಭಾಷೆಗೆ ಅನುವಾದಿಸಿ ಅವುಗಳಿಗೆ ಸಿ.ಅಶ್ವತ್ಥ್ ಅವರ ಸಂಗೀತ ಅಳವಡಿಸಿಕೊಂಡು ಹಿಂದಿ ಗಾಯಕರಿಂದ ಹಾಡಿಸಿ 'ತುಮಾರೆ ಸಿವಾ ಔರ್ ಕೋಯಿ ನಹಿ' ಎನ್ನುವ ಶೀರ್ಷಿಕೆಯಡಿ ವಚನಗಳಿಗೆ ಭಾವಪೂರ್ಣವಾಗಿ 24 ಜನ ನೃತ್ಯ ಕಲಾವಿದೆಯರು ಅಭಿನಯಿಸಲಿದ್ದಾರೆ. ಇದೊಂದು ವಿಶಿಷ್ಟ, ವಿನೂತನ ಮತ್ತು ಭಾರತ ದೇಶದಲ್ಲೇ ಪ್ರಥಮ ವಚನ ಸಾಂಸ್ಕೃತಿಕ ಅಭಿಯಾನವಾಗಲಿದೆ ಎಂದು ಸ್ವಾಮೀಜಿ ಹೇಳಿದ್ದಾರೆ.

ಇಂದು ದೃಶ್ಯ (ದೂರದರ್ಶನ) ಮತ್ತು ವಿದ್ಯುನ್ಮಾನ ಮಾಧ್ಯಮಗಳಿಗೆ (ಮೊಬೈಲ್, ವಾಟ್ಸಪ್, ಯೂಟೂಬ್, ಫೇಸ್‌ಬುಕ್ ಇತ್ಯಾದಿ) ಅಂಟಿಕೊಂಡಿರುವ ಜನರು ಶರಣರ ವಚನ ಸಾಹಿತ್ಯದತ್ತ ಗಮನ ಹರಿಸುವುದು ಅಷ್ಟಕ್ಕಷ್ಟೆ ಆಗಿದೆ. ಹೀಗೇ ಮುಂದುವರಿದರೆ ಮುಂದೆ ವಚನಗಳನ್ನು ಓದುವ ಆಸಕ್ತಿಯೇ ಕಮರಿಬಿಡಬಹುದು.



ಹೀಗಾಗಬಾರದು ಎನ್ನುವ ಹಿನ್ನೆಲೆಯನ್ನಿಟ್ಟುಕೊಂಡು

ಕಲಾಸಂಘ ಮತ್ತು ಶ್ರೀಮಠದ ಅಡಿಯಲ್ಲಿ ನಾಟಕ, ವಚನಗೀತೆ, ವಚನ ನೃತ್ಯ, ಮತ್ತೆ ಕಲ್ಯಾಣ, ಶ್ರಾವಣ ಸಂಜೆ, ಪುಸ್ತಕ ಪ್ರಕಟಣೆ, ಇಷ್ಟಲಿಂಗ ದೀಕ್ಷೆ, ಸರ್ವಶರಣರ ಸಮ್ಮೇಳನ ಮತ್ತಿತರ ಕಾರ್ಯಯೋಜನೆಗಳನ್ನು ನಿರಂತರವಾಗಿ ಆಯೋಜಿಸುತ್ತ ಬರುತ್ತಿವೆ. 2018ರಲ್ಲಿ ನೂರು ಶಾಲಾಮಕ್ಕಳ 'ನೀನಲ್ಲದೆ ಮತ್ತಾರೂ ಇಲ್ಲವಯ್ಯಾ' ಎನ್ನುವ ವಚನ ನೃತ್ಯರೂಪಕದ ಮೂಲಕ ಜನರನ್ನು ಜಾಗೃತಗೊಳಿಸುವ, ವಚನಾಸಕ್ತಿಯನ್ನು ಮೂಡಿಸುವ ಪ್ರಯತ್ನ ನಡೆದಿತ್ತು.

ಈ ಪ್ರದರ್ಶನ ಮುಂಬೈಯಲ್ಲಿ ನಡೆದಾಗ ಅಲ್ಲಿಯ ಪ್ರೇಕ್ಷಕರು ಇದೇ ನೃತ್ಯವನ್ನು ಹಿಂದಿಯಲ್ಲಿ ಮಾಡಿದರೆ ಕನ್ನಡಿಗರೇತರರಿಗೂ ಸುಲಭವಾಗಿ ತಲುಪುತ್ತದೆ ಎನ್ನುವ ಒತ್ತಾಸೆಯನ್ನು ವ್ಯಕ್ತಪಡಿಸಿದ್ದರು. ಅದರಂತೆ ಬಸವಣ್ಣನವರ 38 ವಚನಗಳನ್ನು ಹಿಂದಿ ಭಾಷೆಗೆ ಅನುವಾದಿಸಿ ಹಿಂದಿ ಗಾಯಕರಿಂದ ಹಾಡಿಸಿ ರೆಕಾರ್ಡ್ ಮಾಡಲಾಗಿದೆ.

### ನಾಳೆಯಿಂದ ಸಾಂಸ್ಕೃತಿಕ ಅಭಿಯಾನ

ಇದರ ಮೊದಲ ಪ್ರಯೋಗ ಮತ್ತು ಉದ್ಘಾಟನೆ ಜುಲೈ 2ರ ಭಾನುವಾರ ಸಂಜೆ 4-30ಕ್ಕೆ ಬೆಂಗಳೂರಿನ 'ಕೊಂಡಜ್ಜಿ ಬಸಪ್ಪ ಸಭಾಂಗಣ'ದಲ್ಲಿ ನಡೆಯಲಿದೆ. ಈ ನೃತ್ಯರೂಪಕದ ಉದ್ಘಾಟನೆಯನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ನೆರವೇರಿಸಲಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅಧ್ಯಕ್ಷತೆ ವಹಿಸಲಿದ್ದಾರೆ.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ರಾಜ್ಯ ಸಚಿವ ಎ. ನಾರಾಯಣ ಸ್ವಾಮಿ, ರಾಜ್ಯ ಸರಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಎಂ. ಬಿ. ಪಾಟೀಲ, ಹೊಸದುರ್ಗ ಶಾಸಕ ಬಿ. ಜಿ. ಗೋವಿಂದಪ್ಪ, ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ. ಜಿ. ಆರ್. ಸಿಂಧ್ಯಾ ಮತ್ತು ಈ ನೃತ್ಯ ರೂಪಕದ ಪರಿಕಲ್ಪನೆ ಮತ್ತು ಯೋಜನಾ ನಿರ್ದೇಶಕರಾಗಿರುವ ಶ್ರೀನಿವಾಸ ಜಿ ಕಪ್ಪಣ್ಣ ಉಪಸ್ಥಿತರಿರುತ್ತಾರೆ.

**ಒಂದು ಗಂಟೆಯ ಕಾಲಾವಧಿಯ ಈ ವಚನ ಸಾಂಸ್ಕೃತಿಕ ಅಭಿಯಾನ ಜುಲೈ 2 ರಂದು ಆರಂಭವಾಗಿ ಸೆಪ್ಟೆಂಬರ್ 2ಕ್ಕೆ ಮುಕ್ತಾಯಗೊಳ್ಳಲಿದೆ. ಈ ಅವಧಿಯಲ್ಲಿ ಕಲಾವಿದರು ಕಲಾಸಂಘದ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಾ ಹೈದ್ರಾಬಾದ್, ಕೊಲ್ಕೊತ್ತಾ, ವಾರಣಾಸಿ, ದೆಹಲಿ, ಜೈಪುರ, ಮುಂಬೈ, ಚೆನ್ನೈ ನಗರಗಳು ಸೇರಿದಂತೆ ಸುಮಾರು 12 ಸಾವಿರ ಕಿ.ಮೀ. ಪ್ರಯಾಣದಲ್ಲಿ 14 ರಾಜ್ಯಗಳಲ್ಲಿ 60ಕ್ಕೂ ಹೆಚ್ಚು ಪ್ರದರ್ಶನ ನೀಡಲಿದ್ದಾರೆ.**

**- ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸಾಣೇಹಳ್ಳಿ**

**ಸೈಟ್ ಮಾರಾಟಕ್ಕೆ**
20X30 ಪೂರ್ವ,
J H ಪಟೇಲ್ ಬಡಾವಣೆ (25 ಲಕ್ಷ)
ಕರ್ನಾಟಕ ಗೃಹ ಮಂಡಳಿ, 20X30 ಪೂರ್ವ
(15 ಲಕ್ಷ), ಉತ್ತರ (12 ಲಕ್ಷ)
ಕಿರಣ್ ಭೂಸನೂರ್ (ಏಜೆಂಟ್)
97315-63409

**ಬೆಂಗಳೂರಿನಲ್ಲಿ ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಮಲ್ಲೇಶ್ವರಂ ಸಂಪಿಗೆ ರೋಡ್ ಪಶ್ಚಿಮ
80x100, ಪಶ್ಚಿಮ ದಕ್ಷಿಣ ಕಾರ್ನರ್
150x180, ಶೇಷಾದ್ರಿಪುರಂ
ಉತ್ತರ-ಪಶ್ಚಿಮ ಕಾರ್ನರ್ 80x100
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
ಎಸ್.ಎಸ್. ಬಡಾವಣೆ ಕ್ಲಾಕ್ ಟವರ್ ಸರ್ಕಲ್ ಹತ್ತಿರ ಪ್ರತಿದಿನ ಬೆಳಿಗ್ಗೆ ಕಾಂಪೌಂಡ್ ಕಸಗುಡಿಸಿ, ಕಾರ್ ತೊಳೆಯಲು ಹಾಗೂ ಇತರೆ ಸಣ್ಣಪುಟ್ಟ ಕೆಲಸ ಮಾಡಿಕೊಡುವ ಹುಡುಗ ಬೇಕಾಗಿದ್ದಾರೆ. ಸಂಪರ್ಕಿಸಿ.
80732 13305

**ಹಾಲ್ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರಸ್ತೆಯಲ್ಲಿರುವ ಶಿಲ್ಪ ಡಯಾಗ್ನಸ್ಟಿಕ್ಸ್ ಪಕ್ಕದಲ್ಲಿರುವ ಶ್ವೇತ ಬಿಲ್ಡಿಂಗ್‌ನ ಮೊದಲನೇ ಮಹಡಿಯಲ್ಲಿ ಹಾಲ್ ಬಾಡಿಗೆಗೆ ಇದೆ.
98440 65638

**ಸೈಟುಗಳು ಮಾರಾಟಕ್ಕೆ**
ಬನಶಂಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ, ಸಿದ್ದವೀರಪ್ಪ, ಗ್ಲಾಸ್ ಹೌಸ್ ಲೇಔಟ್ ಹಾಗೂ ದಾವಣಗೆರೆಯ ಎಲ್ಲಾ ಬಡಾವಣೆಯಲ್ಲಿ 30x40, 30x50, 40x60, 50x80, ಸೈಟುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ ಹಾಗೂ ಹೊಲಗಳಿಗೆ ವಿಚಾರಿಸಿ:
97315 12365

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಬಾಡಿಗೆಗೆ ಇದೆ**
2 BHK ಗ್ರೌಂಡ್ ಫ್ಲೋರ್, ವಾಸ್ತು ಪ್ರಕಾರ ನೀರಿನ ಸೌಲಭ್ಯ, ಮುನ್ಸಿಪಲ್ ಹಾಗೂ ಬೋರ್‌ವೆಲ್) ಕಾರ್ ಪಾರ್ಕಿಂಗ್ ಇದೆ. ಎಸ್.ಎಸ್. ಬಡಾವಣೆ, 2ನೇ ಕ್ರಾಸ್ ವಿ.ವಿ. ರೆಸಿಡೆನ್ಸ್, #1678/A ದಾವಣಗೆರೆ.
94487 27266, 94481 34340, 94496 15656

**ಮನೆ ಮಾರುವುದಿದೆ**
ಜಯನಗರ 'ಎ' ಬ್ಲಾಕ್ ಕಾಳಿದಾಸ ಸರ್ಕಲ್ ಹಿಂಭಾಗ 30x40 ಅಳತೆಯ ಎರಡು ಅಂತಸ್ತಿನ ಪಶ್ಚಿಮ ದಿಕ್ಕಿನ ಕಾರ್ನರ್ ಎರಡು ವರ್ಷದ ಸುಸಜ್ಜಿತ ಹೊಸ ಮನೆ ಮಾರುವುದಿದೆ. ಸಂಪರ್ಕಿಸಿ.
9482764316
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

**EC / ಇಸಿ, E-swathu, Khatha Change Building Licence & Other Property Documents**
96118-66449

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಬೇಕಾಗಿದ್ದಾರೆ**
ಖಾನಾವಳಿಯಲ್ಲಿ ಸಪ್ಲೈಯರ್ ಹಾಗೂ ಕ್ಲೀನರ್ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
99861 17995
73538 89971

**ಬಾಡಿಗೆಗೆ ಇದೆ**
ಶ್ರೀ ವಿನಯ್ ಎಂಟರ್ ಪ್ರೈಸಸ್‌ರವರ ಮೊದಲನೇಯ 20x100 ಮಹಡಿ (1ನೇ ಫ್ಲೋರ್) ಬಾಡಿಗೆಗೆ ಇದೆ. ವಿಚಾರಿಸಿರಿ. ವಿಳಾಸ : RMC ರೋಡ್, ಬಂಬೂ ಬಜಾರ್, ಹೆಚ್.ಪಿ. ಪೆಟ್ರೋಲ್ ಬಂಕ್ ಪಕ್ಕ, ದಾವಣಗೆರೆ.
94486 67685, 88926 81923

**ಡಾ॥ ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.5.7.2023ರ ಬುಧವಾರ
ದಿ.6.7.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**WANTED**
Required Male Office Assistant
ANDANUR CHITS (R)
Ram & Co. Circle, Davanagere.

**ಬೇಕಾಗಿದ್ದಾರೆ**
ಕೊರಿಯರ್ ಡೆಲಿವರಿ ಬಾಯ್ಸ್ ದಾವಣಗೆರೆ ಶಾಖೆಗೆ ಬೇಕಾಗಿದ್ದಾರೆ. (Flipkart, Amazon, Delivery) ತಿಂಗಳಿಗೆ ಗಳಿಕೆ 25,000ರೂ.
99800 79893

**ಸ್ಟೇಟ್‌ಪಾರ್ಕ್ ಫಿಟ್‌ನೆಸ್‌ನಲ್ಲಿ**
ರಿಸೆಪ್ಷನಿಸ್ಟ್ ಆಗಿ ಕಾರ್ಯನಿರ್ವಹಿಸಲು ಕಂಪ್ಯೂಟರ್ ಗೊತ್ತಿರುವ ಹಿಂದಿ, ಇಂಗ್ಲೀಷ್ ಗೊತ್ತಿರುವವರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ :
98453 55008, 74112 03440

**ಮನೆ ಬಾಡಿಗೆಗೆ ಇದೆ**
ಪೂರ್ವ ದಿಕ್ಕಿನ ಸಾಯಿ ಬಾಬಾ ದೇವಸ್ಥಾನ ಹಿಂಭಾಗ ಎಂಸಿಸಿ 'ಎ' ಬ್ಲಾಕ್‌ನಲ್ಲಿ 3BHK ಮನೆ ಬಾಡಿಗೆಗೆ ಇದೆ.
70196 18397

**ಹೊಸ ಮನೆ ಮಾರಾಟಕ್ಕಿದೆ**
30x40 ಸೈಜ್, ಉತ್ತರ ದಿಕ್ಕಿನ ಸೈಟ್‌ನಲ್ಲಿ 2 BHK ಮನೆ ಸಿದ್ದಗಂಗಾ ಲೇಔಟ್, ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಹಿಂಭಾಗ, ದಾವಣಗೆರೆ.
95384 86666, 63605 94165

**ಬೇಕಾಗಿದ್ದಾರೆ**
20 ವರ್ಷ ಮೇಲ್ಪಟ್ಟ ಪುರುಷ ಅಭ್ಯರ್ಥಿಗಳು ಅಲ್ಯೂಮಿನಿಯಂ ಫ್ಯಾಬ್ರಿಕೇಷನ್ ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ : ದಾವಣಗೆರೆ.
86182 60719

**2,3 BHK House for Rent**
9th Main, P.J.Extension, Church Oppsoite Road, Davanagere. Direct Contact :
98456 97939

**ಮನೆ ಬಾಡಿಗೆಗೆ / ಲೀಸ್ ಗಿದೆ**
3 ಬೆಡ್ ರೂಂನ ಸುಸಜ್ಜಿತ ಉತ್ತರ ದಿಕ್ಕಿನ ಮೊದಲ ಮಹಡಿ ಮನೆ ಶ್ರೀನಿವಾಸ ನಗರ, 4ನೇ ಕ್ರಾಸ್, ಹದಡಿ ರಸ್ತೆ, ದಾವಣಗೆರೆ ಇಲ್ಲಿ ಬಾಡಿಗೆಗೆ/ ಲೀಸ್ ಗಿದೆ. ಸಂಪರ್ಕಿಸಿ :
9972342941

**2 BHK House for Rent**
1st Floor, Behind Kaveri Apt. near Shivaganga Conventional Hall, Mahalakshmi layout, Kundwada Road, Dvg Contact :
77951 62788

**ವಧು ಬೇಕಾಗಿದೆ**
ಸ್ವಂತ ಶಿಕ್ಷಣ ಸಂಸ್ಥೆ ನಿರ್ವಹಿಸಿಕೊಂಡು ಹೋಗುತ್ತಿರುವ ಹುಡುಗನಿಗೆ ಪಂಚಮಸಾಲಿ ವಧು ಬೇಕಾಗಿದೆ. ಸಂಪರ್ಕಿಸಿ.
95356 10817

**HOUSE FOR RENT**
2nd floor 40x30 Semi furnished Swami Vivekanand Badavane Behind Mahesh PU College 7th B Main #4103. Contact :
89044 34445

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಬೆಳಿಗ್ಗೆ 8 ರಿಂದ ಸಂಜೆ 5 ರವರೆಗೆ.
99453 66847

**ಜಮೀನು ಮಾರಾಟಕ್ಕಿದೆ**
ದಾವಣಗೆರೆ-ಚನ್ನಗಿರಿ ಹೆದ್ದಾರಿ ಪಕ್ಕದ ಬಾಡದ ಪೆಟ್ರೋಲ್ ಬಂಕ್ ಹತ್ತಿರ, ಹೆದ್ದಾರಿಗೆ ಲಗತ್ತಾಗಿ ಸ.ನಂ. 172/1 ಮತ್ತು 172/3 ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ.
94487 12303, 94492 64631

**ಬೇಕಾಗಿದ್ದಾರೆ**
ರೂಂ ಸರ್ವೀಸ್ ಬಾಯ್ಸ್ ಬೇಕಾಗಿದ್ದಾರೆ.
ನ್ಯೂ ನಂದಿ ಲಾಡ್ಜ್
ಕೆ.ಆರ್.ರಸ್ತೆ, ಎಲ್.ಐ.ಸಿ. ಆಫೀಸ್ ಹತ್ತಿರ, ದಾವಣಗೆರೆ.
ಭೇಟಿಯ ಸಮಯ ಸಂಜೆ 5-30 ರಿಂದ 7-00 ರವರೆಗೆ. ಸಂಪರ್ಕಿಸಿ :
08192- 276411, 277187

**ಬೇಕಾಗಿದ್ದಾರೆ**
ತಕ್ಷಣ ಬೇಕಾಗಿದ್ದಾರೆ. ತಮ್ಮ ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ.
1) ಸೇಲ್ಸ್‌ಮೆನ್ / ಸೇಲ್ಸ್‌ಗರ್ಲ್ಸ್
2) ಕಂಪ್ಯೂಟರ್ ಆಪರೇಟರ್
3) ಕ್ಲೀನರ್, ಸಂಪರ್ಕಿಸಿ.
63631 97523

**ವಾಣಿಜ್ಯ ಮಳಿಗೆ ಬಾಡಿಗೆಗೆ**
ಎಂಸಿಸಿ ಎ ಬ್ಲಾಕ್, 7ನೇ ಮೇನ್ ರೆಡ್ಡಿ ಬಿಲ್ಡಿಂಗ್ ಪಕ್ಕದಲ್ಲಿ ರುವ ಗ್ರೌಂಡ್ ಫ್ಲೋರ್ 10x12 ಅಡಿವುಳ್ಳ ಕಮರ್ಷಿಯಲ್ ಮಳಿಗೆ ಬಾಡಿಗೆಗೆ ಇದೆ.
99009 99929, 97424 57556

**ಮನೆ ಮಾರಾಟಕ್ಕಿದೆ**
ನೂತನವಾಗಿ ನಿರ್ಮಿಸಿರುವ ಉತ್ತರ ದಿಕ್ಕಿನ 20x35 ಮನೆ ಮಾರಾಟಕ್ಕಿದೆ. ಸ್ಥಳ : ಡಾಕ್ಟರ್ ಲೇಔಟ್, ಎಸ್. ಎಸ್. ಹೈಟೆಕ್ ರೋಡ್, ನಿಸರ್ಗ ಕಾನ್ವೆಂಟ್ ಪಕ್ಕ, ಸಂಪರ್ಕಿಸಿ :
78995 50339

**ಬೇಕಾಗಿದ್ದಾರೆ**
ಸ್ಟೀಲ್ ಫರ್ನೀಚರ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ನ್ಯೂ ನಯನ ಫರ್ನೀಚರ್, ಮಂಡಿಪೇಟೆ, ದಾವಣಗೆರೆ.
99017 16310

**WANTED**
School Bus Driver
SKPD Vidyapeeta Dvg
BSVJ School / KVS High School.
(Bydagi Shetru School)
P.J Extn. Davanagere.
81978 58611, 91132 59221

**WANTED**
Wanted Female For Computer Teacher-2, Salary 9000+
Spoken English Teacher-2, Salary 12000+
At AVK Road, Davangere.
95910 78215

**ಸೈಟು - ಮನೆ ಬೇಕು**
ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿ ನಿವೇಶನ ಅಥವಾ ಮನೆ ಮಾರಾಟಕ್ಕೆ ಬೇಕಾಗಿದೆ. ಸಂಪರ್ಕಿಸಿ :
99005-21848

**ಮನೆ ಬಾಡಿಗೆಗೆ ಇದೆ**
#1828/A25, ಆಂಜನೇಯ ಬಡಾವಣೆ, 18ನೇ ಕ್ರಾಸ್‌ನಲ್ಲಿ 1ನೇ ಮಹಡಿಯಲ್ಲಿ ಪೂರ್ವ ದಿಕ್ಕಿಗೆ ವಾಸ್ತು ಪ್ರಕಾರದ ಸಿಂಗಲ್ ಬೆಡ್‌ರೂಂ, ಬೋರ್‌ವೆಲ್ ನೀರಿನ ಸೌಲಭ್ಯವಿರುವ ಮನೆ ಬಾಡಿಗೆಗಿದೆ.
94498 05750, 94494 22901

**AVOID MOSQUITOES**
Mosquito Nets For Doors & Windows
SRI GOWRI ENTERPRISES
#7C2, 4th Cross, Near, Shaneshwara Temple Karur Industrial-Area, P.B. Road, DVG-6.
72049 94628

**ತಕ್ಷಣ ಬೇಕಾಗಿದ್ದಾರೆ**
ಅಂಗಡಿ ಮತ್ತು ಫ್ಯಾಕ್ಟರಿಯಲ್ಲಿ ಸಹಾಯಕಿಯರು, ಮಹಿಳೆಯರು, ಟೈಲರಿಂಗ್‌ಗೆ 20 ಮಹಿಳೆಯರು ಹಾಗೂ ಪಾರ್ಟ್ ಟೈಂ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
88614 38237

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೋರಿಯರ್ ಸೌಲಭ್ಯವಿದೆ)
91487 33213

**WANTED**
S.V Marekting Davangere, P.B road, Harihara Road, Vinobhanagar, 4th Main
Sales and Collection Boy
ಸೇಲ್ಸ್ ಮತ್ತು ಕಲೆಕ್ಷನ್ ಹುಡುಗರು ಬೇಕಾಗಿದ್ದಾರೆ.
94480 46571, 78993 37571

**ಬಾಡಿಗೆಗೆ ಇದೆ**
ಶ್ರೀ ವಿನಾಯಕ ಕೃಪಾ, ಹಳೆಯ ಸೇತುವೆ, ರೇಣುಕಾ ಬಡಾವಣೆಯಲ್ಲಿ 2 BHK ಮನೆ ಮೊದಲನೆಯ ಮಹಡಿಯಲ್ಲಿ ಬೋರ್‌ವೆಲ್ ನೀರಿನ ಸೌಲಭ್ಯದೊಂದಿಗೆ ಬಾಡಿಗೆಗೆ ಲಭ್ಯವಿದೆ. (ಸಸ್ಯಾಹಾರಿಗಳಿಗೆ ಮಾತ್ರ)
91640 84261, 80736 97789

**WANTED**
PHARMASIST
CONTACT :
SHILPA DIAGNOSTICS PVT LTD.,
MCC B BLOCK, NEAR SWIMMING POOL, DAVANGERE.
98440 65638

ನೀರಿನ ಬಳಕೆ ಮಿತ - ನಾಡಿಗೆ ಹಿತ

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

**ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.**
ಡಾ॥ ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ವಾಟರ್ ಪ್ರೂಫಿಂಗ್ (ನೀರಿನ ಲೀಕೇಜ್)**
ನಿಮ್ಮ ಮನೆಯ ಅಥವಾ ಕಟ್ಟಡಗಳ, ಮಹಡಿ, ಮೆಟ್ಟಿಲುಗಳು, ಬಾತ್ ರೂಂ, ಟೆರೇಸ್, ಸಂಪು, O.H ಟ್ಯಾಂಕ್, ಗೋಡೆಯ ಬಿರುಕು, ಕೀಟುಗಳ ಬಿರುಕು, ಕಿಟಕಿ, ಸಜ್ಜಾ, ಈಜುಕೊಳ, ಇತ್ಯಾದಿ ಯಾವುದೇ ರೀತಿಯ ನೀರಿನ ಲೀಕೇಜ್ ಆಗುತ್ತಿದ್ದರೆ, ನಮ್ಮನ್ನು ತಕ್ಷಣವೇ ಸಂಪರ್ಕಿಸಿ :
80955 09025
ಕೆಲಸ 100% ಗ್ಯಾರಂಟಿಯಿದೆ.

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕಿನಲ್ಲಿ ತೋಟ ನೋಡಿಕೊಳ್ಳಲು ಒಂದು ಕುಟುಂಬ ಬೇಕಾಗಿದ್ದಾರೆ. ಅನುಭವ ವಿದ್ದವರಿಗೆ ಆದ್ಯತೆ.
94484 39639

**ಡ್ರೈವರ್ ಬೇಕಾಗಿದ್ದಾರೆ**
ಶ್ರೀ ಸಾಯಿ ಏಜೆನ್ಸಿಯಲ್ಲಿ ಕೆಲಸ ಮಾಡಲು ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
90358 88939

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. PUC or any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**TO LET**
New House (vastu) for Rent and Lease.
Real estate Agent
30x40 Ground Floor, 30x50 -1st floor, 40x60 - 1st floor.
Contact : 63606-62436

**SHOP FOR RENT**
MCC Block, Mama's joint road And Boys hostel road
82177 72482

**2 BHK House for Rent or Lease**
Near Podar International School in J.H. Patel badavane, Davanagere.
95358 41058, 88617 11072

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಬೆಂಕಿ ಪೊಟ್ಟಣಗಳು ಹಾಗೂ ಅರಸನ್ ಡಿಟರ್ಜೆಂಟ್ಸ್ ಸೋಪು ಮಾರಾಟ ಮಾಡಲು ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ. ವಿಷನ್ ಕಂಪ್ಯೂಟರ್ಸ್
9742394900, 9886094900

**ಬೇಕಾಗಿದ್ದಾರೆ**
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮಲ್ಲೇ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ/ ವಿಚ್ಛೆದಿತೆಯರು ಹೋಂ. ನರ್ಸಿಂಗ್ ಕೆಲಸಕ್ಕಾಗಿ ಬೇಕಾಗಿದ್ದಾರೆ. ಸಂಬಳ 12,000 ರಿಂದ 18.000 (ಉಚಿತ ಊಟ, ವಸತಿ ಸೌಲಭ್ಯವಿದೆ)
81979 30800, 63661 41518

**ನೊಂದವರಿಗೆ ಮೊದಲ ಆದ್ಯತೆ**
ಶಿರಡಿ ಸಾಯಿಬಾಬಾ ಜ್ಯೋತಿಷ್ಯಾಲಯ
ಇವರು ನುಡಿದಂತೆ ನಡೆಯುವವರು, ಪಂ.ಬಿ.ಹೆಚ್. ರಾವ್. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ -ನಷ್ಟ, ಲೈಂಗಿಕ ಸಮಸ್ಯೆ, ಸ್ತ್ರೀ-ಪುರುಷ ವಶೀಕರಣ, ನಿಮ್ಮ ಮನ ಇಚ್ಛೆ ಗುಪ್ತ ಸಮಸ್ಯೆಗಳಿಗೆ 1 ದಿನದಲ್ಲಿ ಪರಿಹಾರ. ಇಂದೇ ಕರೆ ಮಾಡಿ. ಶಿರಡಿ ಸಂಸ್ಥಾನದಿಂದ ನೇರ ಪರಿಹಾರ.
ಮೊ : 99807 70791

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಮತ್ತು ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಸಂಬಳ ರೂ. 10,000 ರಿಂದ 12,000ರೂ ವರೆಗೆ. ಮತ್ತು ESI, EPF ಸೌಲಭ್ಯವಿದೆ.
9606050599, 9606050594, 9110203348

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಗ್ಯಾಸ್ ಗೀಜರ್**
Fully Automatic 2990/- Rs.
R.O. +uv ವಾಟರ್ ಫಿಲ್ಟರ್, 5490/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

## ಇಂದು ವೈದ್ಯರ ದಿನಾಚರಣೆ

ಜುಲೈ 1- ವೈದ್ಯರುಗಳ ದಿನಾಚರಣೆ,
ರೋಗಿಗಳನ್ನು ನಿರೋಗಿಗಳನ್ನಾಗಿಸುವ ಕಲೆ,
ಅನೇಕ 'ಬೇಕು'ಗಳನ್ನು ತ್ಯಜಿಸಿದ ವೈದ್ಯಕೀಯ ವೃತ್ತಿ,
'ಚೆನ್ನಾಗಿದ್ದೇನೆ ಡಾಕ್ಟ್ರೇ' ಪದವೇ ಮನಸಿಗೆ ಸಂತೃಪ್ತಿ.

ಆರೋಗ್ಯವೇ ಭಾಗ್ಯ - ನಾಣ್ಣುಡಿ ಅರ್ಥ ಗರ್ಭಿತ,
ವೈದ್ಯರ ಸೇವೆ -ರೋಗಿಗಳಿಗಾಗಿ ಅನಂತ,
ಆರೋಗ್ಯವೇ ಬಹು ದೊಡ್ಡ ಆಸ್ತಿ- ಅಂತಸ್ತು
ಆರೋಗ್ಯದಿಂದಿರಲು ಅವಶ್ಯ ತುಸು ವ್ಯಾಯಾಮ ಕಸರತ್ತು.

ಅನಾರೋಗ್ಯದಿಂದ ದೇಹ ನಿತ್ರಾಣ,
ವೈದ್ಯರಿಂದ ಸಮಯಕ್ಕೆ ಚಿಕಿತ್ಸೆ - ಉಳಿಯುವುದು ಪ್ರಾಣ,
ಇತಿಮಿತಿ ಯಾದ ಪೌಷ್ಟಿಕಾಂಶವುಳ್ಳ ಆಹಾರ ಸೇವನೆ,
ವೈದ್ಯರ ಸೂಕ್ತ ಸಲಹೆಗಳಿಂದ ದೂರ - ಬೇನೆ

ಸೃಷ್ಟಿ ಕರ್ತನ ದೇಹರಚನೆ- ಲಕ್ಷಾಂತರ ನರಮಂಡಲ,
ಅತಿ ಅವಶ್ಯಕ- ರೋಗಿಯ ಅರಿಯಲು ಕೊಂಚ ಸಮಯ,
ವೈದ್ಯರಲ್ಲಿಯೂ 'ಮಾನವ'ನನ್ನು ಹುಡುಕುವುದು ಅವಶ್ಯ,
ಚಿಕಿತ್ಸೆಗಾಗಿ ರೋಗಿಯ ಪರಿವಾರದಿಂದ ಸಹಕಾರ ಅತ್ಯಗತ್ಯ.

ರೋಗ ಉಲ್ಬಣಿಸುವ ಮುಂಚೆ ವೈದ್ಯರ ಭೇಟಿ,
ಉತ್ತಮ ಚಿಕಿತ್ಸೆ ಯಿಂದ ರೋಗ ಹತೋಟಿ,
ವೈದ್ಯರ ಮೇಲಿರಲಿ ವಿಶ್ವಾಸ- ಗೌರವ-ನಂಬಿಕೆ,
ವೈದ್ಯರ ಮೇಲೆ ಮುನಿದರೆ - ಶೂನ್ಯ ಚೇತರಿಕೆ.

ಹಗಲು- ರಾತ್ರಿಗಳೆನ್ನದೇ ಶ್ರಮಿಸುವ ಜೀವ,
ನಿರುತ್ಸಾಹದ ಬದುಕಿಗೆ ಅದುವೇ ಮರುಜೀವ,
ರೋಗಿಯ ಮೊಗದಲ್ಲಿ ಸದಾ ಮಂದಹಾಸದ ಸದ್ಬಯಕೆ,
ಕೃತಜ್ಞತೆಯ ಮನೋಭಾವದಿಂದ ಸಂತಸ - ವೈದ್ಯಕೀಯ ವೃಂದಕ್ಕೆ.....,

Happy Doctors day
ತನು- ಮನಗಳ ನೋವನ್ನು ನಿವಾರಿಸಿ ಮರು ಜನ್ಮಕರುಣಿಸುವ
ವೈದ್ಯಕೀಯ ವೃಂದಕ್ಕೆ ಸಮರ್ಪಣೆ...,

**- ಡಾ|| ದೀಪಶ್ರೀ ಪ್ರಮೋದ್ ಗುಜ್ಜರ್**, ಉಪನ್ಯಾಸಕರು
ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಆಸ್ಪತ್ರೆ, ದಾವಣಗೆರೆ

## ಪತ್ರಕರ್ತರ ಕುಟುಂಬಕ್ಕೆ ಉಚಿತ ಆರೋಗ್ಯ ತಪಾಸಣೆ

ದಾವಣಗೆರೆ, ಜೂ. 30- ಪತ್ರಕರ್ತರು ಮತ್ತವರ ಕುಟುಂಬ ವರ್ಗದವರಿಗೆ ನಗರದ ಪ್ರೀತಿ ಆರ್ಥೈಕೆ ಟ್ರಸ್ಟ್ ವತಿಯಿಂದ ನಾಳೆ ದಿನಾಂಕ 1 ರಿಂದ 10 ರವರೆಗೆ ಹತ್ತು ದಿನಗಳ ಕಾಲ ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಆಸ್ಪತ್ರೆ ಮುಖ್ಯಸ್ಥ ಡಾ.ಟಿ.ಜಿ. ರವಿಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜು.1 ರಂದು ಬೆಳಿಗ್ಗೆ 10 ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರದ ಉದ್ಘಾಟನೆ ನಡೆಯಲಿದ್ದು, ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಮಾಜಿ ಶಾಸಕ ಟಿ. ಗುರುಸಿದ್ಧನಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವರದಿಗಾರರ ಕೂಟದ ಪ್ರಧಾನ ಕಾರ್ಯದರ್ಶಿ ಸಿ. ವರದರಾಜ್, ಖಜಾಂಚಿ ಮಧು ನಾಗರಾಜ್ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಪ್ರೀತಿ ಆರೈಕೆ ಟ್ರಸ್ಟ್‌ನ ಟ್ರಸ್ಟಿ ಚಿರಂತನ್ ಟಿ. ರವಿಕುಮಾರ್, ಸಂಯೋಜಕ ವಿರಾಜ್ ಕೆ. ಅಣಜಿ ಉಪಸ್ಥಿತರಿದ್ದರು.

# 5 ರಂದು ಸಂಸದ ಸಿದ್ದೇಶ್ವರರ 71ನೇ ಜನ್ಮದಿನೋತ್ಸವ



ದಾವಣಗೆರೆ, ಜೂ. 30- ಮಾಜಿ ಕೇಂದ್ರ ಸಚಿವರೂ ಆದ ಸಂಸದ ಜಿ.ಎಂ. ಸಿದ್ದೇಶ್ವರ ಅವರ 71 ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಅಭಿಮಾನಿ ಬಳಗದ ವತಿಯಿಂದ ಜುಲೈ 5 ರಂದು ಬೆಳಿಗ್ಗೆ 10.30 ಕ್ಕೆ ನಗರದ ಹಳೆ ವಾಣಿ ಹೋಂಡ ಶೋ ರೂಂ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದಿನ ಕಾರ್ಯಕ್ರಮವನ್ನು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸುವರು. ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಎ. ನಾರಾಯಣಸ್ವಾಮಿ, ಮಾಜಿ ಸಚಿವರಾದ ಕೆ.ಎಸ್. ಈಶ್ವರಪ್ಪ, ಶ್ರೀರಾಮುಲು, ಮುರುಗೇಶ್ ನಿರಾಣಿ ಭಾಗವಹಿಸಲಿದ್ದಾರೆ.

ವಿಧಾನ ಪರಿಷತ್ ಮುಖ್ಯಸಚೇತಕ ವೈ.ಎ. ನಾರಾಯಣಸ್ವಾಮಿ, ಶಾಸಕರಾದ ಬಿ.ಪಿ. ಹರೀಶ್, ಎಂ. ಚಂದ್ರಪ್ಪ, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್, ಮಾಜಿ ಶಾಸಕರಾದ ಎಂ.ಪಿ. ರೇಣುಕಾಚಾರ್ಯ, ಜಿ.ಕರುಣಾಕರ ರೆಡ್ಡಿ, ಎಸ್.ವಿ. ರಾಮಚಂದ್ರ, ಮಾಡಾಳು ವಿರೂಪಾಕ್ಷಪ್ಪ, ಪ್ರೊ.ಎನ್. ಲಿಂಗಣ್ಣ, ಎಂ. ಬಸವರಾಜನಾಯ್ಕ, ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಚನ್ನಗಿರಿ ತುಮ್ಕೋಸ್ ಮಾಜಿ ಅಧ್ಯಕ್ಷ ಹೆಚ್.ಎಸ್. ಶಿವಕುಮಾರ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆಂದು ಯಶವಂತರಾವ್ ತಿಳಿಸಿದರು.

ಇದೇ ಸಂದರ್ಭದಲ್ಲಿ ಪೌರ ಕಾರ್ಮಿಕರು, ಕ್ರೀಡಾಪಟುಗಳು, ಬಿಜೆಪಿ ನಿಷ್ಠಾವಂತ ಕಾರ್ಯಕರ್ತರನ್ನು ಗುರುತಿಸಿ ಅವರನ್ನು ಸನ್ಮಾನಿಸಲಾಗುವುದು. ಈ ಕಾರ್ಯಕ್ರಮಕ್ಕೆ ಸುಮಾರು 20 ಸಾವಿರ ಜನ ಆಗಮಿಸುವ ನಿರೀಕ್ಷೆ ಇದೆ. ಇವರೆಲ್ಲರಿಗೂ ಊಟದ ವ್ಯವಸ್ಥೆಯನ್ನೂ ಸಹ ಮಾಡಲಾಗಿದೆ. ಅಭಿಮಾನಿಗಳೇ ಕಾರ್ಯಕ್ರಮದ ಖರ್ಚನ್ನು ಭರಿಸಲಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮಕ್ಕೂ ಮುನ್ನ ಆವರಗೆರೆ ಬಳಿ ಇರುವ ಗೋಶಾಲೆಗೆ ತೆರಳಿ ಗೋವುಗಳಿಗೆ ಮೇವು ವಿತರಿಸಲಾಗುವುದು. ನಂತರ ನಗರ ದೇವತೆ ದುರ್ಗಾಂಬಿಕ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ವೇದಿಕೆ ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಿದ್ದೇಶ್ವರ ಅವರು ಸತತ ನಾಲ್ಕು ಬಾರಿ ಸಂಸದರಾಗಿ, ಒಂದು ಬಾರಿ ಕೇಂದ್ರ ಸಚಿವರಾಗಿ ದಾವಣಗೆರೆ ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ನಿರಂತರವಾಗಿ 20 ವರ್ಷ ಸಂಸದರಾಗಿ ಸೇವೆ ಸಲ್ಲಿಸುತ್ತಿರುವುದು ಹಾಗೂ 71ನೇ ವರ್ಷದ ಜನ್ಮ ದಿನದ ಅಂಗವಾಗಿ ಅದ್ದೂರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಎಸ್.ಟಿ. ವೀರೇಶ್, ದೂಡಾ ಮಾಜಿ ಅಧ್ಯಕ್ಷರಾದ ರಾಜನಹಳ್ಳಿ ಶಿವಕುಮಾರ್, ಎ.ವೈ. ಪ್ರಕಾಶ್, ದೇವರಮನಿ ಶಿವಕುಮಾರ್, ಮುಖಂಡರಾದ ಹೆಚ್.ಎನ್. ಶಿವಕುಮಾರ್, ಕೊಂಡಜ್ಜಿ ಜಯಪ್ರಕಾಶ್, ಅಣಬೇರು ಜೀವನಮೂರ್ತಿ, ಮಂಜ್ಯಾನಾಯ್ಕ, ರಮೇಶ್ ನಾಯ್ಕ, ಎಲ್.ಡಿ. ಗೋಣೆಪ್ಪ, ಜಿ.ಎಸ್. ಶ್ಯಾಮ್, ಬಿ.ಟಿ. ಸಿದ್ದಪ್ಪ, ಶಿವರಾಜ್ ಪಾಟೀಲ್, ಸೋಗಿ ಶಾಂತಕುಮಾರ್, ಸುರೇಶ್, ಎನ್. ರಾಜಶೇಖರ್ ಮತ್ತಿತರರು ಉಪಸ್ಥಿತರಿದ್ದರು.

## ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ಸಭೆ



ದಾವಣಗೆರೆ, ಜೂ.30 - ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ 54 ನೇ ವಾರ್ಷಿಕ ಮಹಾಸಭೆಯು ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಸಂಘದ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆಯಿತು. ಸರ್ವ ಸದಸ್ಯರ ಸಭೆಯಲ್ಲಿ 2022-23 ರ ಕಾರ್ಯ ಚಟುವಟಿಕೆಗಳು ಮತ್ತು ಆರ್ಥಿಕ ವ್ಯವಹಾರಗಳ ಬಗ್ಗೆ ಚರ್ಚೆ ನಡೆಯಿತು. 75 ವರ್ಷಗಳನ್ನು ಪೂರೈಸಿದ ಸದಸ್ಯರುಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಡಾ. ಹೆಚ್.ಎಂ. ವೀರಯ್ಯ, ವಿಭಾಗೀಯ ಉಪಾಧ್ಯಕ್ಷ ಎಸ್. ಗುರುಮೂರ್ತಿ, ಕಾರ್ಯದರ್ಶಿ ಬಿ.ಕೆ. ರೇಣುಕಾಮೂರ್ತಿ, ನಿಕಟ ಪೂರ್ವ ಅಧ್ಯಕ್ಷ ಕೆ.ಜಿ. ಭರತರಾಜ್, ಕೆ.ದೇವೇಂದ್ರಪ್ಪ, ಬಿ.ದಿಳ್ಯಪ್ಪ, ಸಿ.ಜಿ. ಕಲ್ಲಪ್ಪ, ಬಿ.ಎಂ. ಮಲ್ಲಿಕಾರ್ಜುನಯ್ಯ, ಎನ್.ಜಿ. ಬಸವರಾಜ್, ಕೆ.ನಾಗಪ್ಪ, ಎನ್.ಮಹೇಶ್ವರಪ್ಪ ಹಾಗೂ ಇತರರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಡಾ.ಅಗರವಾಲ್ಸ್ ಕಣ್ಣಿನ ಆಸ್ಪತ್ರೆಯಿಂದ ಉಚಿತ ಚಿಕಿತ್ಸೆ ನಡೆಸಲಾಯಿತು.

## ಕೆರೆ ತುಂಬಿಸುವ ಯೋಜನೆ : ವಿಳಂಬ

**(1ನೇ ಪುಟದಿಂದ)** ಎಂದು ಸೂಚಿಸಿದರು.

ತುಪ್ಪದಹಳ್ಳಿ ಕೆರೆಯ ನೀರಿನ ಪೌಂಟೇನ್ (ಚಿಲುಮೆ) ಭರಮಸಾಗರ ಕೆರೆಯ ಮಾದರಿಯಲ್ಲಿ ನಿರ್ಮಾಣ ಮಾಡಬೇಕು. ತುಪ್ಪದಹಳ್ಳಿ ಕೆರೆಯಿಂದ ಉಳಿದ ಕೆರೆಗಳಿಗೆ ಶೀಘ್ರ ಪೈಪ್ ಲೈನ್ ಕಾಮಗಾರಿ ಪೂರ್ಣಗೊಳಿಸಿ ಮಾರ್ಗ ಮಧ್ಯೆ ಅಡೆತಡೆಗಳು ಬಂದರೆ ಸ್ಥಳೀಯ ಶಾಸಕರ ಗಮನಕ್ಕೆ ತಂದು ತಾಂತ್ರಿಕ ದೋಷ ಸರಿಪಡಿಸಿಕೊಳ್ಳಬೇಕು. ಕಾಮಗಾರಿ ವಿಳಂಬ ಮಾಡಿದರೆ ಪೆನಾಲ್ಟಿ ಹಾಗೂ ನೋಟೀಸ್ ಜಾರಿಮಾಡಲು ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕಗೆ ಸೂಚಿಸಿದರು.

ಜಗಳೂರು ಶಾಸಕ ಬಿ. ದೇವೇಂದ್ರಪ್ಪ ಮಾತನಾಡಿ, ತುಪ್ಪದಹಳ್ಳಿ ಕೆರೆಗೆ ಪ್ರಾಯೋಗಿಕವಾಗಿ ನೀರು ಹರಿಸಿದಾಗ ಕ್ಷೇತ್ರದ ರೈತರಲ್ಲಿ ಮಂದಹಾಸ ಮೂಡಿತ್ತು. ಆದರೆ ನಂತರ ಗುತ್ತಿಗೆದಾರ ಹಾಗೂ ಇಂಜಿನಿಯರ್ ಗಳ ನಿರ್ಲಕ್ಷ್ಯದಿಂದ ಪೈಪ್ ಲೈನ್ ಕಾಮಗಾರಿ ವಿಳಂಬವಾಗಿದೆ. ರೈತರು ನೀರು ಹರಿಯುವ ನಿರೀಕ್ಷೆಯಲ್ಲಿ ಕಾದು ಕುಳಿತಿದ್ದಾರೆ. ಜಗಳೂರು ಕೆರೆಗೆ ನೀರು ಹರಿಸಿದರೆ 30 ಕೆರೆಗಳು ಭರ್ತಿಯಾಗಲಿವೆ. ಸಬೂಬು ಹೇಳದೇ ಕೆಲಸ ಮಾಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ನೀರಾವರಿ ನಿಗಮದ ಮುಖ್ಯ ಇಂಜಿನಿಯರ್ ಧನಂಜಯ್ ಮಾಹಿತಿ ನೀಡಿ, ತುಪ್ಪದಹಳ್ಳಿ ಕೆರೆಗೆ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ. ಶೀಘ್ರದಲ್ಲಿ 11 ಕೆರೆಗಳಿಗೆ ನೀರು ಹರಿಸಲು ಸಿದ್ದತೆ ನಡೆಸಲಾಗಿದೆ ಎಂದರು.

ದೀಟೂರು ಬಳಿ ಜಾಕ್‌ವೆಲ್, ಪಂಪ್ ಹೌಸ್, ಕಂಟ್ರೋಲ್ ರೂಂ, ಸ್ಪ್ರೀಮಿಂಗ್, ಚಟ್ನಹಳ್ಳಿ ಡಿಲೆವರಿ ಛೇಂಬರ್, ಕಾಮಗಾರಿ ಮುಕ್ತಾಯವಾಗಿದೆ. 18 ಕಿ.ಮೀ. ಪೈಪ್ ಲೈನ್ ಕಾಮಗಾರಿ ಪ್ರಗತಿಯಲ್ಲಿದೆ. 7 ಕಿ.ಮೀ. ಪೈಪ್ ಲೈನ್ ಕಾಮಗಾರಿಗೆ 1.5 ಸುತ್ತಳತೆಯ ಪೈಪ್‌ಗಳು ಪೂರೈಕೆಯಾಗಿಲ್ಲ. ವಾರದೊಳಗೆ ಸರಿಪಡಿಸಲಾಗುವುದು ಎಂದರು.

ಕರ್ನಾಟಕ ನೀರಾವರಿ ನಿಗಮ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ್ ಬಸಪ್ಪ ಗುಂಗೆ ಮಾತನಾಡಿ, ಜಗಳೂರು ತಾಲ್ಲೂಕಿನ 57 ಕೆರೆ ತುಂಬಿಸುವ ಯೋಜನೆಯ ಪೈಪ್‌ಲೈನ್ ಕಾಮಗಾರಿ ಪ್ರಗತಿ ವರದಿ ಪಡೆಯಲಾಗುವುದು. ಶೀಘ್ರ ಕಾಮಗಾರಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ವಿಳಂಬ ನೀತಿ ಅನುಸರಿಸಿದರೆ ನಿಯಮಾನುಸಾರ ಗುತ್ತಿಗೆದಾರರಿಗೆ ಪೆನಾಲ್ಟಿ ಹಾಗೂ ನೋಟಿಸ್ ಜಾರಿ ಮಾಡಲಾಗುವುದು ಎಂದರು.

ಸಭೆಯಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ, ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್, ಮಾಯಕೊಂಡ ಶಾಸಕ ಬಸವಂತಪ್ಪ, ಶಿವಮೊಗ್ಗ ನೀರಾವರಿ ನಿಗಮದ ಮುಖ್ಯ ಇಂಜಿನಿಯರ್ ಪ್ರಶಾಂತ್, ಅಪ್ಪರ್ ಭದ್ರಾ ಇಲಾಖೆಯ ಮುಖ್ಯ ಇಂಜಿನಿಯರ್ ಶಿವಾನಂದ ಬಣಕಾರ್, ಗುತ್ತಿಗೆದಾರ ದಯಾನಂದ ಸೇರಿದಂತೆ, ರೈತ ಮುಖಂಡರುಗಳು ಭಾಗವಹಿಸಿದ್ದರು.

**ಶ್ರೀಗಳಿಗೆ ಶಾಸಕರಿಂದ ಸನ್ಮಾನ:** ಅವರು ಸಭೆಗೂ ಮುನ್ನ ಶಾಸಕ ಬಿ.ದೇವೇಂದ್ರಪ್ಪ ಅವರು ತರಳಬಾಳು ಶ್ರೀಗಳಿಗೆ ಗೌರವ ಪೂರ್ವಕವಾಗಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಕಲ್ಲೇಶ್ ರಾಜ್ ಪಟೇಲ್, ಷಂಷೀರ್ ಅಹಮ್ಮದ್, ಶಶಿಧರ ಪಟೇಲ್, ಪಲ್ಲಾಗಟ್ಟೆ ಶೇಖರಪ್ಪ, ಪ್ರಕಾಶ್ ರೆಡ್ಡಿ, ಸುಧೀರ್ ರೆಡ್ಡಿ, ಗೌಸ್, ತಿಮ್ಮಣ್ಣ ಸೇರಿದಂತೆ ರೈತ ಮುಖಂಡರುಗಳು ಇದ್ದರು.

## ನಗರದಲ್ಲಿ ಇಂದಿನಿಂದ ವನಮಹೋತ್ಸವ ಕಾರ್ಯಕ್ರಮ

ಸಾರ್ವಜನಿಕರ, ಸಂಘ-ಸಂಸ್ಥೆಗಳ, ರೈತರ ಸಹಭಾಗಿತ್ವದೊಂದಿಗೆ ಇಂದಿನಿಂದ ಇದೇ ದಿನಾಂಕ 7 ರವರೆಗೆ ನಡೆಯುವ ವನಮಹೋತ್ಸವದ ಅಂಗವಾಗಿ ಅರಣ್ಯೇತರ ಪ್ರದೇಶಗಳಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಅರಣ್ಯೇತರ ಸರ್ಕಾರಿ ಸ್ಥಳಗಳು, ರಸ್ತೆ ಬದಿ, ಶೈಕ್ಷಣಿಕ ಸಂಸ್ಥೆಗಳ ಆವರಣ, ಆಸ್ಪತ್ರೆಗಳ ಆವರಣ, ಕೈಗಾರಿಕಾ ಪ್ರದೇಶಗಳ ಆವರಣ, ಧಾರ್ಮಿಕ ಸಂಘ-ಸಂಸ್ಥೆಗಳ ಆವರಣ, ವಿಶ್ವವಿದ್ಯಾಲಯಗಳ ಆವರಣ, ಸರ್ಕಾರಿ ಇಲಾಖೆಗಳ ಆವರಣ, ರೈತರ ಜಮೀನುಗಳು ಮತ್ತು ಜಮೀನುಗಳ ಬದುಗಳು ಹಾಗೂ ಕೆರೆ ಅಂಗಳಗಳು ಇತ್ಯಾದಿ ಪ್ರದೇಶಗಳಲ್ಲಿ ಸ್ಥಳೀಯ ಜಾತಿಯ ಗಿಡಗಳನ್ನು ವ್ಯಾಪಕವಾಗಿ ಬೆಳೆಸಲು ಎಲ್ಲಾ ಸರ್ಕಾರಿ ಇಲಾಖೆಗಳು, ಸ್ಥಳೀಯ ಸಂಸ್ಥೆಗಳಾದ ಪಂಚಾಯಿತಿಗಳು, ನಗರಸಭೆಗಳು, ನಗರಪಾಲಿಕೆಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಪರಿಸರ ಸಂಘಟನೆಗಳು ಹಾಗೂ ಇತರೆ ಆಸಕ್ತ ಸರ್ಕಾರೇತರ ಸಂಘ-ಸಂಸ್ಥೆಗಳನ್ನು ಸಕ್ರಿಯವಾಗಿ ತೊಡಗಿಸಿಕೊಂಡು ರಾಜ್ಯಾದ್ಯಂತ ಸಸಿ ನೆಡುವ ಕಾರ್ಯಕ್ರವನ್ನು ಅನುಷ್ಠಾನಗೊಳಿಸಲಾಗಿದೆ.

ಕಾರ್ಯಕ್ರಮದಲ್ಲಿ ಭಾಗವಹಿಸುವ ಆಸಕ್ತರು ದಾವಣಗೆರೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು- 08192-262527, 94496 32508, ದಾವಣಗೆರೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ತಾಂತ್ರಿಕ ಸಹಾಯಕರು - 9481179049 / 9481991702, ವಲಯ ಅರಣ್ಯಾಧಿಕಾರಿ, ದಾವಣಗೆರೆ ವಲಯ ಅರಣ್ಯಾಧಿಕಾರಿ - 9448766626 / 9481991703, ಜಗಳೂರು ವಲಯ ಅರಣ್ಯಾಧಿಕಾರಿ-9739657275 / 9481991705, ಹೊಸಕೆರೆ ರಂಗಯ್ಯನದುರ್ಗ ವನ್ಯಜೀವಿ ವಲಯ ಅರಣ್ಯಾಧಿಕಾರಿ - 9620393451 / 9481991706, ಹೊನ್ನಾಳಿ ವಲಯ ಅರಣ್ಯಾಧಿಕಾರಿ - 872291012 / 9481991704 ಅರಣ್ಯ ಇಲಾಖಾ ಕಛೇರಿಯನ್ನು ಸಂಪರ್ಕಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್. ಹೆಚ್.ಜಗನ್ನಾಥ್ ತಿಳಿಸಿದ್ದಾರೆ.

## ಶಿರಮಗೊಂಡನಹಳ್ಳಿ : ಇಂದು ಸ್ವಯಂ ಪ್ರೇರಿತ ರಕ್ತದಾನ ಶಿಬಿರ

ಭಾರತ ವಿಕಾಸ ಪರಿಷದ್, ಸ್ವಾಮಿ ವಿವೇಕಾನಂದ ಶಾಖೆ, ಅನ್‌ಮೋಲ್ ವಿದ್ಯಾಸಂಸ್ಥೆ, ಶಿರಮಗೊಂಡನಹಳ್ಳಿ ಹಾಗೂ ಕರ್ನಾಟಕ ಹಿಮೋಫಿಲಿಯಾ ಸೊಸೈಟಿ ಇವರ ಸಹಭಾಗಿತ್ವದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಅನ್‌ಮೋಲ್ ಶಾಲೆಯಲ್ಲಿ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಪರಿಷದ್ ಅಧ್ಯಕ್ಷ ಎಲ್.ವಿ. ನಾಗಾನಂದ್ ತಿಳಿಸಿದ್ದಾರೆ.

## ಕುಣೆಬೆಳಕೆರೆಗೆ ಇಂದು ಸಂಸದರು

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಮಧ್ಯಾಹ್ನ 12 ಗಂಟೆಗೆ ಹರಿಹರ ತಾಲ್ಲೂಕು ಕುಣೆಬೆಳಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶೌಚಾಲಯ ಹಾಗೂ ಸ್ವಚ್ಛ ಸಂಕೀರ್ಣ ಘಟಕದ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲ್ಲಿದ್ದಾರೆ.

## ಇಂದು ಶಾಲಾ ಮಂತ್ರಿ ಮಂಡಲದ ಪ್ರತಿಜ್ಞಾ ಸ್ವೀಕಾರ, ವಿದ್ಯಾರ್ಥಿ ಸಂಘದ ಉದ್ಘಾಟನೆ

ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪೌಢಶಾಲೆಯಲ್ಲಿ ಶಾಲಾ ಮಂತ್ರಿ ಮಂಡಲದ ಪ್ರತಿಜ್ಞಾ ಸ್ವೀಕಾರ ಮತ್ತು ವಿದ್ಯಾರ್ಥಿ ಸಂಘಗಳ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 10.30 ಕ್ಕೆ ಶಾಲಾ ಆವರಣದಲ್ಲಿರುವ ಪ್ರಶಾಂತಿ ಸಭಾಂಗಣದಲ್ಲಿ ನಡೆಯಲಿದೆ. ಅಧ್ಯಕ್ಷತೆಯನ್ನು ಶ್ರೀಮತಿ ಸುಜಾತ ಕೃಷ್ಣ ಕೆ.ಆರ್. ವಹಿಸುವರು. ಮುಖ್ಯ ಅತಿಥಿಯಾಗಿ ವಾಮದೇವಪ್ಪ ಬಿ. ಆಗಮಿಸುವರು. ಕಾರ್ಯಕ್ರಮದಲ್ಲಿ ಜಿ.ಆರ್. ವಿಜಯಾನಂದ್, ಶ್ರೀಮತಿ ಎ.ಆರ್. ಉಷಾ ರಂಗನಾಥ್, ಶ್ರೀಮತಿ ಸುಜಾತ ಎ.ಪಿ., ಶ್ರೀಮತಿ ಸುಜಾತ ಕೆ.ವಿ. ಉಪಸ್ಥಿತರಿರುವರು.

## ನಗರದ ಎಸ್‌ಬಿಸಿ ಕಾಲೇಜಿನಲ್ಲಿ ಇಂದು

ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು (ಎಸ್.ಬಿ.ಸಿ.) ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ ಇವುಗಳ ಸಾಂಸ್ಕೃತಿಕ, ಕ್ರೀಡಾ, ಎನ್ನೆಸ್ಸೆಸ್ ಘಟಕ ಹಾಗೂ ರೆಡ್ ಕ್ರಾಸ್ ಘಟಕದ ಸಮಾರೋಪ ಸಮಾರಂಭ ಹಾಗೂ ಪ್ರಸಕ್ತ ಸಾಲಿನ ವಿದ್ಯಾರ್ಥಿ - ವಿದ್ಯಾರ್ಥಿನಿಯರ ಸಂಘದ ವಾರ್ಷಿಕೋತ್ಸವ ಸಮಾರಂ ಭವು ಇಂದು ಬೆಳಿಗ್ಗೆ 10.30 ಕ್ಕೆ ಕಾಲೇಜಿನ ಆಡಿಟೋರಿಯಂನಲ್ಲಿ ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆಯನ್ನು ಅಥಣಿ ವೀರಣ್ಣ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಶಿಶುಪಾಲ್ ಎಸ್., ಬಿ.ಸಿ. ಉಮಾಪತಿ, ಎನ್.ಎ. ಮುರುಗೇಶ್ ಆಗಮಿಸುವರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂಶುಪಾಲ ಡಾ. ಷಣ್ಮುಖ ಕೆ. ನಡೆಸಿಕೊಡುವರು.

# ವಿದ್ಯಾರ್ಥಿಗಳ ಭವಿಷ್ಯ ರೂಪಿಸಬೇಕಾದದ್ದು ಕಾಲೇಜಿನ ಕರ್ತವ್ಯ

## ಆರ್.ಜಿ. ಕಾಲೇಜಿನ ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆ ಅಧ್ಯಕ್ಷರಾದ ಶ್ವೇತಾ ಆರ್. ಗಾಂಧಿ




ದಾವಣಗೆರೆ, ಜೂ. 30- ಉದ್ಯಮದ ಟ್ರೆಂಡ್‌ಗಳನ್ನು ಹಾಗೂ ಅಗತ್ಯತೆಗಳಿಗೆ ಅನುಗುಣವಾಗಿ ಉತ್ತೀರ್ಣರಾಗಿ ಹೊರ ಹೋಗುವ ವಿದ್ಯಾರ್ಥಿಗಳ ಭವಿಷ್ಯ ರೂಪಿಸಬೇಕಾದದ್ದು ಕಾಲೇಜಿನ ಕರ್ತವ್ಯ ಎಂದು ಆರ್.ಜಿ. ವಿದ್ಯಾಸಂಸ್ಥೆ ಅಧ್ಯಕ್ಷೆ ಶ್ವೇತಾ ಆರ್. ಗಾಂಧಿ ಹೇಳಿದರು.

ನಗರದ ಆರ್.ಜಿ. ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ದ್ವಿತೀಯ ವರ್ಷದ ಮತ್ತು ತೃತೀಯ ವರ್ಷದ ಬಿ.ಕಾಂ. ಹಾಗೂ ಬಿ.ಎ. ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಮೂರೂ ದಿನಗಳ ವ್ಯಕ್ತಿತ್ವ ವಿಕಸನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ರೀತಿಯ ಕಾರ್ಯಕ್ರಮ ದಾವಣಗೆರೆಯಲ್ಲಿಯೇ ಪ್ರಥಮವಾಗಿದ್ದು, ಕಳೆದ ಎರಡು ವರ್ಷಗಳ ಕೋವಿಡ್ ಕರಾಳತೆಯಿಂದ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಮೂಡಿದ ನಿರಾಸೆಯ ಕಾರ್ಮೋಡ ಕರಗಿಸಲು ಈ ಮೂರು ದಿನಗಳ ಕಾರ್ಯಾಗಾರ ಅತ್ಯಂತ ಪರಿಣಾಮಕಾರಿಯಾಗಿದೆ. ವಿದ್ಯಾರ್ಥಿಗಳ ಭದ್ರ ಭವಿಷ್ಯಕ್ಕೆ ಅನುವಾಗಿದೆ ಎಂದು ತಿಳಿಸಿದರು.

ರಾಷ್ಟ್ರಮಟ್ಟದ ತರಬೇತುದಾರ ಆರ್.ಕೆ. ಬಾಲಚಂದ್ರ ಮಾತನಾಡಿ, ಮುಖ್ಯವಾಗಿ ಅಂತಿಮ ವರ್ಷದ ವಿದ್ಯಾರ್ಥಿಗಳು ಪದವಿ ಪಡೆದು ಹೊರ ಬಂದಾಗ ಎದುರಿಸಬಹುದಾದ ಮಾನಸಿಕ ತಲ್ಲಣಗಳು ಹಾಗೂ ಅದರಿಂದ ಹೊರಗೆ ಬರಬೇಕಾದ ಅಗತ್ಯತೆಗಳನ್ನು ವಿವರಿಸಲು ಈ ಕಾರ್ಯಕ್ರಮ ರೂಪಿಸಲಾಗಿದ್ದು, ಬ್ಯಾಂಕಿಂಗ್, ಐಎಎಸ್, ಕೆಎಎಸ್ ಸೇರಿದಂತೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಸೇರಿದಂತೆ ಇತರೆ ಮಾಹಿತಿಗಳನ್ನು ನೀಡಿದರು.

ಮುಂಬರುವ ವಾರ್ಷಿಕ ಪರೀಕ್ಷೆಗೆ ಸಜ್ಜಾಗಬೇಕಾದ ರೀತಿ, ದಿನದ 8 ಗಂಟೆಗಳ ಕಾಲ ಸತತವಾಗಿ ನಡೆಯುವ ಕಾರ್ಯಕ್ರದಲ್ಲಿ ಹೇಗೆ ವಿದ್ಯಾರ್ಥಿಗಳು ಭಾಗವಹಿಸಬೇಕು, ಸದ್ಯ ಮಾರುಕಟ್ಟೆಯ ಬೇಡಿಕೆಗಳೇನು ಅದಕ್ಕೆ ಬೇಕಾದ ಪೂರ್ವಸಿದ್ಧತೆಗಳೇನು ಎಂಬಿತರೇ ವಿಷಯಗಳ ಮೇಲೆ ಬೆಳಕು ಚೆಲ್ಲಲಾಗುವುದು ಎಂದರು. ಕಾಲೇಜಿನ ಆಡಳಿತಾಧಿಕಾರಿ ಬಿಂದು ಖೋನಾ ಮಾತನಾಡಿ, ಹೊಸ ಪ್ರಯೋಗಕ್ಕೆ ವಿದ್ಯಾರ್ಥಿಗಳು ತಯಾರಾದಾಗ ಮಾತ್ರ ನಮ್ಮಗಳ ಶ್ರಮ ಸಾರ್ಥಕವಾಗುತ್ತದೆ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಜಿ.ಕೆ. ಗೀತಾ ಮಾತನಾಡಿ, ಯಶಸ್ಸಿಗೆ ಸುಲಭದ ದಾರಿ ಎಂಬುದಿಲ್ಲ. ಕಷ್ಟಪಟ್ಟು ಮಾಡುವುದಕ್ಕಿಂತ ಇಷ್ಟಪಟ್ಟು ಮಾಡಿದಾಗ ಯಶಸ್ಸು ಸುಲಭವಾಗಿ ಸಿಗುತ್ತದೆ ಎಂದು ಕಿವಿಮಾತು ಹೇಳಿದರು.

ಉಪನ್ಯಾಸಕರಾದ ಎಂ.ಆರ್. ಸ್ನೇಹ, ರಾಕೇಶ್, ಪ್ರವೀಣ್‌ಕುಮಾರ್, ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಎಲ್.ಎಂ. ಶರಣಕುಮಾರ್ ಸೇರಿದಂತೆ ಹಳೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸಿಪಿಐ ಸದಸ್ಯರಿಗೆ ಪಕ್ಷದ ಸೈದ್ಧಾಂತಿಕ ಅಧ್ಯಯನ ಶಿಬಿರ

ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮಂಡಳಿ ನೇತೃತ್ವದಲ್ಲಿ ಪಕ್ಷದ ಸದಸ್ಯರಿಗೆ ಸೈದ್ಧಾಂತಿಕ ಅಧ್ಯಯನ ಶಿಬಿರವನ್ನು ಇಂದಿನಿಂದ ಮೂರು ದಿನಗಳ ಕಾಲ ಶೇಖರಪ್ಪ ನಗರದಲ್ಲಿರುವ ಹೆಚ್. ಅಡಿವೆಪ್ಪ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ತಿಳಿಸಿದ್ದಾರೆ.

ಪಕ್ಷದ ಜಿಲ್ಲಾ ಮಂಡಳಿ ಪದಾಧಿಕಾರಿಗಳು, ಜಿಲ್ಲೆಯ ಇತರೆ ತಾಲೂಕುಗಳ ತಾಲೂಕು ಮಂಡಳಿ ಪದಾಧಿಕಾರಿಗಳು, ಶಾಖೆಗಳ ಪದಾಧಿಕಾರಿಗಳು ಸೇರಿದಂತೆ ಸುಮಾರು 75 ಜನ ಸದಸ್ಯರು ಈ ಅಧ್ಯಯನ ಶಿಬಿರದಲ್ಲಿ ಭಾಗವಹಿಸಲಿದ್ದಾರೆ.

ಈ ಮೂರು ದಿನದ ಶಿಬಿರಕ್ಕೆ ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಲು ಪಕ್ಷದ ರಾಜ್ಯ ಮಂಡಳಿ ಕಾರ್ಯದರ್ಶಿ ಸಾತಿ ಸುಂದರೇಶ್, ಸಂಪನ್ಮೂಲ ವ್ಯಕ್ತಿಗಳಾದ ಡಾ. ಸಿದ್ದನಗೌಡ ಪಾಟೀಲ್, ಡಿ.ಎ. ವಿಜಯ ಭಾಸ್ಕರ್, ಎ. ಜ್ಯೋತಿ, ಪಿ.ವಿ. ಲೋಕೇಶ್, ಎಂ.ಸಿ. ಡೋಂಗ್ರೆ ಮತ್ತಿತರರು ಆಗಮಿಸಲಿದ್ದಾರೆ.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು, ಜಿಲ್ಲಾ ಮಂಡಳಿ ಸಹಕಾರ್ಯದರ್ಶಿಗಳಾದ ಹೆಚ್.ಜಿ. ಉಮೇಶ್, ಅವರಗೆರೆ ವಾಸು, ಖಜಾಂಚಿ ಆನಂದರಾಜ್, ಶೇಖರಪ್ಪ-ಸುರೇಶ್-ಪಂಪಾಪತಿ ರೈತ ಕಾರ್ಮಿಕರ ಕಲ್ಯಾಣಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಟಿ.ಎಸ್. ನಾಗರಾಜ್ ಶಿಬಿರದ ನೇತೃತ್ವ ವಹಿಸಲಿದ್ದಾರೆ.


**ನಗರದಲ್ಲಿ ಯಶಸ್ವಿ ನಾಟಕ ಪ್ರದರ್ಶನ**

ಶ್ರೀ ಸಂತ ಶರೀಫ ಶಿವಯೋಗಿ ನಾಟ್ಯಸಂಘ (ರಿ.) ತೆಗ್ಗಿಹಳ್ಳಿ ಇವರಿಂದ
ದಾವಣಗೆರೆ ಪಿ.ಬಿ. ರಸ್ತೆ, ಟಿ.ಎಂ. ವಿನಾಯಕ ಪಿಎಂಪಿಎಸ್. ಕಾಂಪೌಂಡಿನಲ್ಲಿ
ಮಧ್ಯಾಹ್ನ 3 ಗಂಟೆಗೆ, ಸಂಜೆ 6.15ಕ್ಕೆ ಪ್ರತಿದಿನ 2 ಪ್ರದರ್ಶನಗಳು



**ಬಳಿಗಾರ ಹನುಮವ್ವ**

ಹೆಣ್ಣುಮಕ್ಕಳು ಅತ್ಯವಶ್ಯಕವಾಗಿ ನೋಡುವಂತಹ ನಾಟಕ

ಈ ನಾಟಕದಲ್ಲಿ ದಾನಮ್ಮ ದೇವಿ ಚಿತ್ರದಲ್ಲಿ ನಟಿಸಿದ ಆಶಾರಾಣಿ ಬಿಜಾಪುರ ಇವರು ಮುಖ್ಯ ಪಾತ್ರದಲ್ಲಿದ್ದಾರೆ.

ಟಿಕೆಟ್ ದರ ಖರ್ಚು 100/-
ಮಾಲೀಕರು : ಖತಾಲಸಾಬ ಆರ್. ಬಣಗಾರ
ಸಂಚಾಲಕರು : ಆಶಾರಾಣಿ ಬಿಜಾಪುರ


### ಓದುಗರ ಪತ್ರ

## ರಾಜ್ಯ ಸರ್ಕಾರದ 5 ಯೋಜನೆಗಳಿಂದ ಸಂಕಷ್ಟದಲ್ಲಿ ಜನಸಾಮಾನ್ಯರು

**ಮಾನ್ಯರೇ,**

ರಾಜ್ಯ ಸರ್ಕಾರ ಘೋಷಿಸಿರುವ ಐದು ಯೋಜನೆಗಳ ಪರಿಣಾಮ ದಿನದಿಂದ ದಿನಕ್ಕೆ ಮಧ್ಯಮ ವರ್ಗದವರ ಮೇಲೆ ಬೆಲೆ ಏರಿಕೆಯ ಬಿಸಿ ತಟ್ಟುತ್ತಿದೆ. ಅದರಂತೆ ದಿನಸಿ ವಸ್ತುಗಳಾದ ಅಕ್ಕಿ, ಬೇಳೆಕಾಳು, ಅಡುಗೆ ಎಣ್ಣೆ, ಇತರೆ ವಸ್ತುಗಳ ಬೆಲೆ ಏರಿಕೆ ಮಾಡಿರುವುದು ಮತ್ತು ಉಚಿತ ಗೃಹ ಜ್ಯೋತಿ ಯೋಜನೆ ಹೆಸರಿನಲ್ಲಿ ಜನ ಸಾಮಾನ್ಯರು, ಕೈಗಾರಿಕ ಉದ್ಯಮಿಗಳ ಮೇಲೆ ಹೆಚ್ಚಿನ ಬೆಸ್ಕಾಂ ಬಿಲ್ಲಿನ ಹೊರೆತರುವ ಮೂಲಕ ಸಂಕಷ್ಟಕ್ಕೀಡುಮಾಡಿದ್ದಾರೆ.

ನಾರಿಶಕ್ತಿ ಯೋಜನೆ ಅಡಿಯಲ್ಲಿ ಮಹಿಳೆಯರಿಗೆ ಉಚಿತ ಬಸ್ ನೀಡುತ್ತಿರುವ ರಾಜ್ಯ ಸರ್ಕಾರದ ತಪ್ಪು ತೀರ್ಮಾನದಿಂದಾಗಿ ಆಟೋ ಚಾಲಕರು, ಬಸ್ ಮಾಲೀಕರು, ಟ್ಯಾಕ್ಸಿ ಮಾಲೀಕರಿಗೆ ಮತ್ತು ಮಿನಿ ಟೆಂಪೋದವರು ದುಡಿಮೆ ಇಲ್ಲದೆ ವಾಹನಗಳ ಕಂತು, ಶಾಲೆ ಮಕ್ಕಳ ಫೀ, ಮನೆ ಬಾಡಿಗೆ, ಮನೆಯನ್ನು ನಿರ್ವಹಿಸಲಾಗದೆ ಬೀದಿಗೆ ಬರುವಂತಾಗಿದೆ.

ಈ ಕೂಡಲೇ ರಾಜ್ಯ ಸರ್ಕಾರ ಪುನರ್ ಪರಿಶೀಲಿಸಿ ಒಳ್ಳೆಯ ತೀರ್ಮಾನವನ್ನು ತೆಗೆದುಕೊಳ್ಳುವ ಮೂಲಕ ಮಧ್ಯಮ ವರ್ಗದ ಜನರಿಗೆ, ಚಾಲಕರಿಗೆ, ಕೈಗಾರಿಕಾ ವಲಯಗಳಿಗೆ, ಅನುವು ಮಾಡಿಕೊಡಬೇಕೆಂದು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಲಾಗಿದೆ.

**- ಸಂತೋಷ್ ಕುಮಾರ್,**
ಸುವರ್ಣ ಕರ್ನಾಟಕ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷರು

## ಗಿಡ-ಮರ ಪರಿಸರದ ಆಸ್ತಿ: ತಿಮ್ಮಕ್ಕ



ದಾವಣಗೆರೆ, ಜೂ. 30- ಮಕ್ಕಳು ಕುಟುಂಬದ ಆಸ್ತಿಯಾದರೆ, ಗಿಡ-ಮರ ಪರಿಸರದ ಆಸ್ತಿ. ಹಿರಿಯರಾದ ನಾವುಗಳು ಪರಿಸರದ ಬಗ್ಗೆ ಪ್ರೀತಿ ಹೊಂದಬೇಕು. ಮಕ್ಕಳಿಗೆ ಗಿಡ-ಮರ ಬೆಳೆಸುವ ಹವ್ಯಾಸ ರೂಢಿಸಬೇಕು ಎಂದು ಪರಿಸರವಾದಿ, ಶತಾಯುಷಿ ಸಾಲುಮರದ ತಿಮ್ಮಕ್ಕ ಹೇಳಿದರು.

ನಗರದ ಲೋಕಿಕೆರೆ ರಸ್ತೆಯ ರವೀಂದ್ರನಾಥ ಬಡಾವಣೆಯ ಸಿದ್ಧೇಶ್ವರ ಉದ್ಯಾನವನದಲ್ಲಿ ಬಡಾವಣೆಯ ನಾಗರಿಕರು ಆಯೋಜಿಸಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡ ನೆಟ್ಟು ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಸಾಲುಮರದ ತಿಮ್ಮಕ್ಕನವರ ಪುತ್ರ ಉಮೇಶ್ ಬಳ್ಳೂರು, ಬಡಾವಣೆಯ ನಾಗರಿಕ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳಾದ ವೀರಭದ್ರಪ್ಪ, ತಿಮ್ಮೇಶಪ್ಪ, ಮಹೇಶ್ವರಯ್ಯ, ಪಾಲಿಕೆ ಸದಸ್ಯೆ ಗೀತಾ ಅವರ ಪತಿ ನಾಗರಾಜ್, ಪರಿಸರ ಪ್ರೇಮಿಗಳಾದ ಸುರೇಶ್ ಚಾವಡಿ, ನಾಗರಾಜ್ ಸಿರಿಗೆರೆ, ಜಯ್ಯಪ್ಪ, ಮಾಲತೇಶ್, ಶ್ರೀನಿವಾಸರೆಡ್ಡಿ, ಶೇಖರಪ್ಪ, ಜಿ.ಟಿ. ನಾಗರಾಜ್, ಬಸವರಾಜ್ ಐಗೂರು, ಶೈಲಜಾ, ಉಷಾ, ಪ್ರೇಮ, ಶೋಭ, ವೇದ, ಶಶಿಕಲಾ, ಉಮಾ ಮತ್ತಿತರರು ಭಾಗವಹಿಸಿದ್ದರು.


**ಹುಟ್ಟುಹಬ್ಬದ ಶುಭಾಶಯಗಳು**



63 ವಸಂತಗಳನ್ನು ಪೂರೈಸಿ
64ನೇ ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ಶ್ರೀ ಚನ್ನಬಸವೇಶ್ವರ ರೈಸ್ ಟೆಕ್ ಮಾಲೀಕರೂ,
ಸಾಮಾಜಿಕ ಸೇವಾ ಕಾರ್ಯಕರ್ತರೂ, ದಾನಿಗಳೂ ಆದ
**ಶ್ರೀ ಎಸ್.ಜಿ. ಉಳುವಯ್ಯ**
ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.
ಶ್ರೀಯುತರಿಗೆ ಭಗವಂತನು ಆಯುರಾರೋಗ್ಯ
ಭಾಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

♦ ಭುವನೇಶ್ವರಿ ಆಗ್ರೋ ಇಂಡಸ್ಟ್ರೀಸ್ ♦ ರಾಜು ಏಜೆನ್ಸೀಸ್, ರಾಜು
♦ ಶ್ರೀ ವಿನಾಯಕ ರೈಸ್‌ಮಿಲ್, ವಿ. ಸಿದ್ದೇಶ್
♦ ಸ್ವಾಮಿ ಎಂಟರ್‌ಪ್ರೈಸಸ್, ಅಶ್ವಿನಿ ಅಂಡ್ ಕೋ. ♦ ಎ.ಬಿ.ಸಿ. ಚಂದ್ರಣ್ಣ
♦ ಮೆ|| ಕರೂರು ಚಿರಂಜೀವಿ ಆಗ್ರೋ ಫುಡ್ಸ್, ಆವರಗೊಳ್ಳ





## ಅಗ್ನಿವೀರ್ ಆಯ್ಕೆಗೆ 17ರಿಂದ ಪರೀಕ್ಷೆ

ದಾವಣಗೆರೆ, ಜೂ.30- ಭಾರತೀಯ ಸೇನೆಯಲ್ಲಿನ ಅಗ್ನಿವೀರ್ ನೇಮಕಾತಿ ರ್‍ಯಾಲಿಯು ಉಡುಪಿಯಲ್ಲಿನ ಮಹಾತ್ಮಗಾಂಧಿ ಸ್ಟೇಡಿಯಂನಲ್ಲಿ ಜುಲೈ 17 ರಿಂದ 25 ರ ವರೆಗೆ ನಡೆಯಲಿದೆ. ಅಗ್ನಿ ವೀರ್ ನೇಮಕಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ದೈಹಿಕ ಮತ್ತು ವೈದ್ಯಕೀಯ ಪರೀಕ್ಷೆಯನ್ನು ನಡೆಸಲಾಗುತ್ತದೆ.

ಜಿಲ್ಲೆಯಿಂದ 91 ಜನರು ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಇವರು ಜುಲೈ 17 ರಂದು ಉಡುಪಿ ಮಹಾತ್ಮಗಾಂಧಿ ಸ್ಟೇಡಿಯಂನಲ್ಲಿ ದೈಹಿಕ ಹಾಗೂ ವೈದ್ಯಕೀಯ ಪರೀಕ್ಷೆಗಾಗಿ ಹಾಜರಾಗಬೇಕು. ವಿವರಕ್ಕೆ ಸಂಪರ್ಕಿಸಿ : 0824-2951276.

# ಸಂಘರ್ಷಗಳ ಅಂತ್ಯಕ್ಕೆ ಏಕರೂಪ ನಾಗರಿಕ ಸಂಹಿತೆ ಬೇಕು : ರಂಭಾಪುರಿ ಶ್ರೀ

ಹರಿಹರ, ಜೂ. 30- ಏಕರೂಪ ನಾಗರಿಕ ಸಂಹಿತೆ ಜಾರಿಗೆ ತಂದರೆ ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ದಿನ ನಿತ್ಯ ನಡೆಯುತ್ತಿರುವ ಸಂಘರ್ಷಗಳು ಅಂತ್ಯ ಆಗುವ ಸಾಧ್ಯತೆಯಿದೆ ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ದೇವಸ್ಥಾನ ರಸ್ತೆಯ ರೇಣುಕಾ ಮಂದಿರದ ಸಭಾಂಗಣದಲ್ಲಿ ನಡೆಯುತ್ತಿರುವ ಇಷ್ಟಲಿಂಗ ಪೂಜೆ ಹಾಗೂ ಧರ್ಮ ಜಾಗೃತಿ ವೇದಿಕೆಯ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮುಂದಿನ ದಿನಗಳಲ್ಲಿ ಏನು ಆಗಬಹುದು ಎಂಬ ನಿರೀಕ್ಷೆ ಅಥವಾ ಚುನಾವಣೆ ದೃಷ್ಟಿಕೋನದಿಂದ ಹೇಳಿರಲಿ, ಆದರೆ ಇದು ಅತ್ಯಂತ ಸೂಕ್ತ ಮತ್ತು ಸಮಂಜಸವಾದ ಮಾತಾಗಿದ್ದು, ಆಗದ ಕೆಲವರು ಅಲ್ಲಗೆಳೆಯುವುದು ಸಹಜ. ಪ್ರಜ್ಞಾವಂತರು, ಜೊತೆಗೆ ಹಿಂದೂ ಸಂಸ್ಕೃತಿಯನ್ನು ಅನುಸರಿಸುವವರು, ದೇಶದ ಸಮಗ್ರತೆಯನ್ನು ರಕ್ಷಿಸಿಕೊಳ್ಳುವವರು, ಅಭಿವೃದ್ಧಿ



ಮತ್ತು ಎಲ್ಲಾ ಸಮುದಾಯದ ಶ್ರೇಯಸ್ಸು ಇಟ್ಟುಕೊಂಡು ಇಂತಹ ಚಿಂತನೆ ಮಾಡಿದ್ದರಿಂದ ಪ್ರತಿಯೊಬ್ಬರೂ ಸ್ಪಂದಿಸಬೇಕಾಗಿದ್ದು, ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು.

**ಹರಿಹರ**

ಭಕ್ತರ ಕಲ್ಯಾಣಕ್ಕಾಗಿ, ಆರೋಗ್ಯ ಪೂರ್ಣ ಸಮಾಜ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರಿಂದ ಆಷಾಢ ಮಾಸದ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಮನುಷ್ಯರು ಧಾರ್ಮಿಕ ಕಾರ್ಯಕ್ರಮ ಮಾಡಿಕೊಂಡು ಬರುವುದಷ್ಟೇ ಅಲ್ಲ, ಅದರ ಹಿಂದೆ ಆರೋಗ್ಯವಂತ ಸಮಾಜಕ್ಕೆ ಪೂರಕವಾದ ಅಂಶಗಳನ್ನು ರೂಢಿಸಿಕೊಂಡು, ಕ್ರಿಯಾಶೀಲರಾಗಿ, ಶ್ರಮವಹಿಸಿ ದುಡಿದರೆ ಜೀವನದಲ್ಲಿ ಆರ್ಥಿಕವಾಗಿ ಸಫಲತೆಯನ್ನು ಪಡೆಯಬಹುದಾಗಿದೆ. ಯಾವ ವ್ಯಕ್ತಿ ಶ್ರಮವಹಿಸಿ ಕೆಲಸ ಮಾಡುತ್ತಾರೋ ಮತ್ತು ಭೂಮಿ ತಾಯಿಗೆ ತನ್ನ ಬೆವರನ್ನು ಸುರಿಸುತ್ತಾರೋ, ಅಂತಹ ವ್ಯಕ್ತಿಗಳು ತಮ್ಮ ಬಾಳಿನಲ್ಲಿ ಉನ್ನತವಾದ ಶ್ರೇಯಸ್ಸು ಕಾಣುತ್ತಾ, ಸಮಾಜದಲ್ಲಿ ಉತ್ತುಂಗದ ಸ್ಥಾನವನ್ನು ಅಲಂಕರಿಸುತ್ತಾರೆ.

ವಿಜ್ಞಾನ ಮನುಷ್ಯನ ಕಲ್ಯಾಣ ಬಯಸಬೇಕು. ಅದನ್ನು ಬಿಟ್ಟು ವಿನಾಶವನ್ನು ಬಯಸಬಾರದು. ಯುವಕರಲ್ಲಿ ಅದ್ಭುತ ಶಕ್ತಿಯಿದೆ. ಯುವ ಸಮುದಾಯವನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡು, ತೆಗೆದುಕೊಂಡು ಹೋಗುವಂತಹ ದಾರ್ಶನಿಕರ ಕೊರತೆ ಮತ್ತು ಧರ್ಮದ ಬಗ್ಗೆ ಆಸಕ್ತಿ, ಪ್ರೋತ್ಸಾಹ ಕಡಿಮೆಯಿಂದ ಅಡ್ಡದಾರಿಯಲ್ಲಿ ಸಾಗುತ್ತಿದ್ದು, ಅವರಿಗೆ ಉತ್ತಮ ಸಂಸ್ಕಾರ ನೀಡಿ, ಅವರ ಜೀವನ ಅಧಃಪತನದತ್ತ ಸಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ಈ ವೇಳೆ ಶಾಸಕ ಬಿ.ಪಿ. ಹರೀಶ್, ಹರಪನಹಳ್ಳಿ ಶ್ರೀ ವರ ಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು, ದೊಡ್ಡ ಬಾತಿ ತಪೋವನ ಚೇರ್ಮನ್, ಶಶಿಕುಮಾರ್ ಮಾತನಾಡಿದರು.

ಈ ಸಂದರ್ಭದಲ್ಲಿ ಕೊಂಡಜ್ಜಿ ಈಶ್ವರಪ್ಪ, ಅಮರಾವತಿ ಗೌಡ್ರು ಮಹಾದೇವಪ್ಪ, ಎನ್. ಇ. ಸುರೇಶ್, ಉಪನ್ಯಾಸಕ ವಜ್ರೇಶ್, ಪಂಚಾಕ್ಷರಿ, ಸಮಾಳ ಚಂದ್ರಪ್ಪ, ರಾಚಪ್ಪ, ಕಂಚಿಕೇರಿ ಶಿವಕುಮಾರ್, ಗುತ್ತೂರು ಹಾಲಸ್ವಾಮಿ, ಕತ್ತಲಗೇರಿ ಶಿವಯೋಗಿ ಸ್ವಾಮಿ, ಹಿರೇಮಠ ಸ್ವಾಮಿ, ಸಿದ್ದಲಿಂಗಸ್ವಾಮಿ, ಮೋಹನ್ ಹಾಸಬಾವಿ. ಇತರರು ಹಾಜರಿದ್ದರು.

## ಸರ್ಕಾರದ 'ಗ್ಯಾರಂಟಿಗಳು' ಸುಲಭದ ಕೆಲಸವಲ್ಲ

ಅಧಿಕಾರ ಚುಕ್ಕಾಣಿ ಹಿಡಿಯಲಿಕ್ಕೆ ಜನರನ್ನು ಎಷ್ಟರಮಟ್ಟಿಗೆ ದಾರಿ ತಪ್ಪಿಸಲಿಕ್ಕೆ ಸಾಧ್ಯವೋ ಅದೆಲ್ಲವನ್ನು ಮಾಡುವಂತ ಕೆಲಸವನ್ನು ಮಾಡಲಾಗುತ್ತಿದೆ. ಮೊನ್ನೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ನಾಡಿನ ರಾಜಕೀಯ ಚಿತ್ರಣ ಬಹಳಷ್ಟು ಏರು ಪೇರು ಆಗಿದ್ದನ್ನು ಕಾಣಬಹುದು.

ಗ್ಯಾರಂಟಿ ಘೋಷಣೆ ಮಾಡಿದ್ದು, ನಮ್ಮನ್ನು ಪೋಷಣೆ ಮಾಡುವ ಉದ್ದೇಶದಿಂದ. ಆದರೆ ಅದಕ್ಕೆ ಚಾಲನೆ ಕೊಡುವುದು ಸುಲಭದ ಕೆಲಸವಲ್ಲ.

ಜನರಿಗೆ ಉತ್ತಮ ಆಡಳಿತ ಕೊಡುವ ಬಗ್ಗೆ ಇನ್ನೂ ಸ್ಥಿರತೆಯನ್ನು ಕಾಣದೇ ಇರುವುದೇ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣವಾಗಿದೆ ಎಂದು ಅನಿಸುತ್ತದೆ ಎಂದು ಜಗದ್ಗುರುಗಳು ಹೇಳಿದರು.

## 'ಬೆಂಗಳೂರು ಬಾಯ್ಸ್' ಚಿತ್ರಕ್ಕೆ ನಗರದ ಸಚಿನ್ ಗಣೇಶ್ ಸಂಕಲನ



ದಾವಣಗೆರೆ, ಜೂ.30- ರಾಜ್ಯದಾದ್ಯಂತ ಇಂದು ತೆರೆ ಕಂಡಿರುವ ಕನ್ನಡ ಚಲನಚಿತ್ರ 'ಬೆಂಗಳೂರು ಬಾಯ್ಸ್' ಚಿತ್ರಕ್ಕೆ ನಗರದ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಸಚಿನ್ ಗಣೇಶ್ ಅವರು ಮುಖ್ಯ ಸಂಕಲನಕಾರರಾಗಿ ಕೆಲಸ ಮಾಡಿದ್ದಾರೆ.

ಸಚಿನ್ ಅವರು ಈ ಹಿಂದೆ ನಿರ್ಮಾಣ ವಾದ ಅದ್ದೂರಿ ಚಿತ್ರಗಳಾದ ಅಂಬರೀಶ್-ಸುದೀಪ್ ಅಭಿನಯದ 'ಅಂಬಿ ನಿಂಗೆ ವಯಸ್ಸಾಯ್ತು' ಮತ್ತು ಅನಂತನಾಗ್-ದಿಗಂತ್‌ರವರ 'ತಿಮ್ಮಯ್ಯ ಅಂಡ್ ತಿಮ್ಮಯ್ಯ' ಚಿತ್ರಗಳ ಸಂಕಲನಕಾರರಾಗಿ ಒಳ್ಳೆಯ ಕೆಲಸ ಮಾಡಿದ್ದರು. ಅಲ್ಲದೇ ಇತ್ತೀಚೆಗೆ ಬಿಡುಗಡೆಯಾದ ತುಳು ಚಿತ್ರ 'ಲಾಸ್ಟ್ ಬೆಂಚ್' ಚಿತ್ರಕ್ಕೂ ಸಂಕಲನ ಮಾಡಿದ್ದರು. ಚಿತ್ರವು ದಕ್ಷಿಣ ಕನ್ನಡದಲ್ಲಿ ಭರ್ಜರಿ ಪ್ರದರ್ಶನ ಕಂಡಿತ್ತು.

'ಬೆಂಗಳೂರು ಬಾಯ್ಸ್' ಚಿತ್ರವನ್ನು ವಿ ಮೇಕರ್ಸ್ ಸಂಸ್ಥೆ ನಿರ್ಮಾಣ ಮಾಡಿದ್ದು, 90ರ ದಶಕದ ಸೂಪರ್ ಹಿಟ್ ಚಿತ್ರಗಳಾದ 'ಅಂತ', 'ರಣ ಧೀರ', 'ಓಂ', ಹಾಗೂ 'ಎ' ಚಿತ್ರಗಳ ನಾಯಕರ ರೀತಿಯಲ್ಲಿಯೇ ಅಭಿನ ಯಿಸಿರುವ ಚಿತ್ರದ ನಾಯಕರು ಉತ್ತಮವಾಗಿ ರಂಜಿಸಿದ್ದಾರೆ. ಸಚಿನ್, ನಗರದ ಸೌತ್ ಇಂಡಿಯನ್ ಬ್ಯಾಂಕ್ ಅಧಿಕಾರಿ ಗಣೇಶ್ ಅವರ ಪುತ್ರ.

## ನಗರದ ಐರಣಿ ಶಾಖಾ ಮಠದಲ್ಲಿ ಇಂದಿನಿಂದ ಗುರುಪೌರ್ಣಿಮೆ



ಐರಣಿ ಹೊಳೆಮಠ ಮಹಾಸಂಸ್ಥಾನದ ಶಾಖಾಮಠದಲ್ಲಿ ಗುರುಪೌರ್ಣಿಮೆ ಹಾಗೂ ಶಾಖಾಮಠದ 16ನೇ ವಾರ್ಷಿಕೋತ್ಸವದ ಪ್ರಯುಕ್ತ ಇಂದಿನಿಂದ 3 ರವರೆಗೆ ಪ್ರತಿದಿನ ಸಂಜೆ 7.30 ಕ್ಕೆ ಸತ್ಸಂಗ, ಭಜನೆ, ಪ್ರವಚನ ಕಾರ್ಯಕ್ರಮಗಳುನ್ನು ಹಮ್ಮಿಕೊಳ್ಳಲಾಗಿದೆ.

ಐರಣಿ ಹೊಳೆಮಠ ಮಹಾಸಂಸ್ಥಾನದ ಶ್ರೀ ಸದ್ಗುರು ಬಸವರಾಜ ದೇಶಿಕೇಂದ್ರ ಸ್ವಾಮೀಜಿ ಸಮ್ಮುಖದಲ್ಲಿ ಗುರುಪೂರ್ಣಿಮ ಕಾರ್ಯಕ್ರಮ ಹಾಗೂ ಶ್ರೀಗಳಿಂದ ಆಶೀರ್ವಚನ ಜರುಗಲಿದೆ. ಕುಳ್ಳೂರಿನ ಶ್ರೀ ಬಸವಾನಂದ ಭಾರತಿ ಸ್ವಾಮೀಜಿ, ಜಡೇಸಿದ್ದೇಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ಉಪಸ್ಥಿತರಿರುವರು.

ದಿನಾಂಕ 3 ರ ಸೋಮವಾರ ಅಖಂಡ ಗುರು ಭಜನೆ, ಪಂಚಾಮೃತ ಅಭಿಷೇಕ, ಶೈಲಾಸ ಮಹಾಪೂಜೋತ್ಸವ ದರ್ಶನ, ಮಹಾಮಂಗಳಾರತಿ, ಮಹಾಪ್ರಸಾದ ಏರ್ಪಾಡಾಗಿದೆ ಎಂದು ಶಾಖಾ ಮಠದ ಜೆ.ಕೆ. ಶಿವಾನಂದ್ ತಿಳಿಸಿದ್ದಾರೆ.

## ಪ್ರತಿಪಕ್ಷದ ನಾಯಕನ ಆಯ್ಕೆ: ಬಿಜೆಪಿ ವರಿಷ್ಠರ ಹೆಗಲಿಗೆ

ಬೆಂಗಳೂರು, ಜೂ. 30- ವಿಧಾನಸಭೆ ಪ್ರತಿಪಕ್ಷದ ನಾಯಕನ ಆಯ್ಕೆ ವಿಚಾರವನ್ನು ರಾಜ್ಯ ಬಿಜೆಪಿ, ಕೇಂದ್ರದ ವರಿಷ್ಠರ ಹೆಗಲಿಗೆ ಹಾಕಿದೆ.

ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದ ಕೋರ್ ಕಮಿಟಿ ಹಾಗೂ ಪಕ್ಷದ ಹಿರಿಯ ಮುಖಂಡರ ಸಭೆಯಲ್ಲಿ ಪ್ರತಿ ಪಕ್ಷದ ನಾಯಕನ ಆಯ್ಕೆಗೆ ಒಮ್ಮತ ಮೂಡದ ಕಾರಣ ತಮ್ಮ ಅಂಗಳದ ಚೆಂಡನ್ನು ದೆಹಲಿಗೆ ಹಾಕಿದ್ದಾರೆ.

ಜು. 3ರಿಂದ ವಿಧಾನ ಮಂಡಲದ ಅಧಿವೇಶನ ಆರಂಭಗೊಳ್ಳುತ್ತಿದ್ದು, ಅದಕ್ಕೂ ಮುನ್ನವೇ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಯಾಗಬೇಕು. ಇದರ ಜತೆಗೆ ಹೊಸ ರಾಜ್ಯಾಧ್ಯಕ್ಷರನ್ನು ನೇಮಕ ಮಾಡಲು ವರಿಷ್ಠರು ಮುಂದಾಗಿದ್ದಾರೆ. ಬಸವರಾಜ ಬೊಮ್ಮಾಯಿ, ಮಾಜಿ ಸಚಿವರಾದ ವಿ.ಸುನಿಲ್ ಕುಮಾರ್ ಹಾಗೂ ಅಶ್ವತ್ಥನಾರಾಯಣ ಅವರ ಹೆಸರು ಚರ್ಚೆಗೆ ಬಂದವಾದರೂ ತೀರ್ಮಾನ ಕೈಗೊಳ್ಳಲು ಕಮಿಟಿಗೆ ಸಾಧ್ಯವಾಗಲಿಲ್ಲ.











